
1087

1938

ANTARANGA 9



ಅಗಲಿದ ಅಕ್ಕ ಸರೋಜಿನಿ

ಎಂ. ವಿ. ಹೆಗ್ಡೆ.





0-3-0

ಕಾರ್ಯಾಲಯ
ಉಡುಪಿ

ಅಂತರಂಗ

(ಸ್ಥಾಪನೆ 1938)

ಪುಸ್ತಕ ೯

ಪ್ರತಿ ಮಂಗಳವಾರ ಪುಸ್ತಕಾಕಾರದಲ್ಲಿ
ಉಡುಪಿಯಿಂದ ಪ್ರಕಟವಾಗುವ ವಾರಪತ್ರಿಕೆ.

ಬಿಡಿಪ್ರತಿಗೆ ರೂ. 0- 3- 0

ಚಂದಾ ಹಣವನ್ನು ಮನಿಯಾರ್ಡರು ಯಾ ಪೋಸ್ಟಲ್
ಆರ್ಡರು ಮೂಲಕ ಮುಂದಾಗಿ ಕಳಿಸಬೇಕು.

ಮೆನೇಜರ್, ಅಂತರಂಗ, ಉಡುಪಿ.

Read & Advertise in
ANTARANGA WEEKLY MAGAZINE

1-3-1949 & 8-3-1949

ಅಗಲಿದ ಅಕ್ಕ ಸರೋಜಿನಿ.

೧

ಮುಮ್ಮಾತು

ಸರೋಜಿನಿದೇವಿ ಹೊರಟುಹೋದರು. ಈ ಸುದ್ದಿ ನಮಗೆ ದೊರೆತು ಇದನ್ನು ಬರೆಯುವ ಹೊತ್ತಿಗೆ ಹೆಚ್ಚು ತಾಸುಗಳು ಕಳೆದಿಲ್ಲ. ಮನಸ್ಸಿಗೆ ಒಂದು ವಿಶೇಷ ರೀತಿಯ ಅನುಭವ ಆಗುತ್ತಿದೆ; ಅದೊಂದು ಸಂತಾಪವೆನ್ನಲಾರೆವು. ನಮ್ಮಲ್ಲಿ ಉಪಚಾರ ಬುದ್ಧಿ ಹೆಚ್ಚಾಗಿ ಹೋಗಿದೆ–ನಮಗೊಂದು ಯೋಗ್ಯ ಸ್ಥಾನ ಸಂಪಾದಿಸಿ ಕೊಡಲಾರದೆಂಬ ಅನುಮಾನ ತೋರಿದರೆ, ನಮ್ಮಲ್ಲಿ ಹುಟ್ಟಿದುದನ್ನೂ ನಮ್ಮದಲ್ಲವೆನ್ನಲು ನಾವು ತಯಾರು; ಆ ಸಂತಾನದ ಜೀವ ತೆಗೆದು ಅದಕ್ಕೆ ಬೇಕಾದ ಆಕಾರ ಕೊಟ್ಟು ಗೊಂಬೆಯಾಗಿ ಶೃಂಗರಿಸಿ ತೋರಿಸಿಬಿಡುತ್ತೇವೆ. ಈ ಸಂಪ್ರದಾಯಾನುಸಾರವಾಗಿ, ಸರೋಜಿನೀದೇವಿಯ ವಿಯೋಗದಿಂದ ಕತ್ತಲೆ ಕವಿಯಿತೆನ್ನುತ್ತಾ ನಾವು ಹಾರ್ದಿಕ ಸಂತಾಪ ಪ್ರದರ್ಶಿಸಬೇಕಾಗಿದೆ; ಆದರೆ ಯಾಕೆ? ಸರೋಜಿನಿ ಸಾಯುವಂಥವರೇ. ಯಾರಿಗೆ ಸಾವಿಲ್ಲ? ಸಾವು ಅಪರಾಧವಲ್ಲ–ಕೊಲೆ ಅಪರಾಧ. ಅದೂ ಕೊಲೆಗಾರನದು ಹೊರತು ಕೊಲೆ ಮಾಡಲ್ಪಡುವವನದಲ್ಲ. ಗಾಂಧಿಜೀ ಕೊಲೆಯಾಗಿಲ್ಲವೆ? ಸರೋಜಿನೀ ವಿಯೋಗ ವಾರ್ತೆಯು ಯಾವುದೋ ಒಂದು ವಿಚಾರಕ್ಕೆ ಜೀವ ಕೊಟ್ಟಂತಿರುವಾಗ ಅದನ್ನು ಕೊಲೆ ಮಾಡಿಕೊಳ್ಳಲು ನಾವು ತಯಾರಿಲ್ಲ. ಅದು ಆವುದೋ ಒಂದು ಪ್ರಕಾಶವನ್ನು ಚೆಲ್ಲಿದಂತಿದೆ; ಆದರೂ ನಾವು ಸರೋಜಿನಿ ಮಡಿದು ಕತ್ತಲೆ ಕವಿದುಕೊಂಡಿತೆಂದು ಹೇಳಬೇಕೆ? ಅದು ಸರೋಜಿನಿಯನ್ನು ದೇಶದ್ರೋಹಿಯೆಂದಷ್ಟೇ ಅಪರಾಧ; ಸಜ್ಜನನನ್ನು ದುರ್ಜನನೆಂದು, ಅಮೃತವನ್ನು ವಿಷವೆಂದು ತೋರಿಸಿ ಕೊಟ್ಟಂತೆಯೇ ಸರಿ. ಮನಸಿನಲ್ಲಿ ಮೂಡಿದುದನ್ನೇ ಬಾಯಿಯಲ್ಲಿ ಆಡುವ--ಸ್ಥಿತಿಯನ್ನು ಇದ್ದಂತೆ ತಿಳಿದುಕೊಳ್ಳುವ--ಅಭ್ಯಾಸವೊಂದು ನಮ್ಮ ಜನರಿಗಾಗಿ ಹೋದರೆ ಬೇರಾವುದೂ ಆಗಬೇಕಿಲ್ಲ; ಆಗಬೇಕಾದುದೆಲ್ಲವೂ ಅದರ ಬೆನ್ನು

ಹಿಡಿದುಕೊಂಡೇ ಆಗುತ್ತವೆ--ಎಂದು ಖಂಡಿತವಾಗಿ ಹೇಳಬಹುದು. ಸಾರ್ವಜನಿಕ ಆರೋಗ್ಯಖಾತೆಯ ಮಂತ್ರಿ ಬಂದರೂ ಊರ ಕೊಳಕು ಬೀದಿಗಳತ್ತ ಅವರ ಕಾರನ್ನೆಂದಿಗೂ ತಿರುಗಿಸದಂತಹ ಗುಣವೇ ನಮ್ಮೆಲ್ಲಾ ನಡೆನುಡಿಗಳಲ್ಲೂ ಇದೆ. ಮನಸ್ಸಿನಲ್ಲಿ, ಕಾರ್ಯದಲ್ಲಿ, ಸಂಗತಿಗಳಲ್ಲಿ ಇರುವ ಕೊಳಕಾವುದನ್ನೂ ಪ್ರದರ್ಶನಕ್ಕಿಡಬಾರದೆಂಬುದೇ ನಮ್ಮ ಕಟ್ಟುಕಟ್ಟಳೆಯಾಗಿದೆ. ಬೊಬ್ಬೆ ಹೊಡೆದು ಊರವರನ್ನೆಲ್ಲಾ ಒಟ್ಟುಗೂಡಿಸಿಯಾದರೂ ಮನೆನುಗ್ಗಿದ ಕಳ್ಳನನ್ನೋಡಿಸುವದು ಕರ್ತವ್ಯ; ಆದರೆ ಮನನುಗ್ಗಿದ ಕಳ್ಳ ಮಾತ್ರ ನಮ್ಮ ಮನಸ್ಸಿನ ಒಂದು ಅಂಗ; ಅದನ್ನು ಬೇಟೆಯಾಡಿದರೆ, ಮಿಕ್ಕವರು ಕಂಡು ನಮ್ಮ ಮಾನಭಂಗವಾಗುತ್ತದೆ. ಜನಜೀವನದ ಎಲ್ಲಾ ರೀತಿಯ ವಂಚನೆಗಳಿಗೂ, ದಗಾಖೋರತನಗಳಿಗೂ ಈ ದುರಭಿಮಾನವೇ ಮೂಲ. ಪುನರ್ರಚನೆಯ, ಶುದ್ಧೀಕರಣದ ಮಾತುಗಳು ಬೇಕಾದಷ್ಟು ಹಾರಾಡುತ್ತಿರುವ ಈ ಕಾಲದಲ್ಲಿ ಮುಂದಾಗಿ ಅವನ್ನು ಹೃದಯಕ್ಕೇನೇ ತಾಗಿಸಿಕೊಳ್ಳೋಣ; ಅಲ್ಲಿ ಏನಿದೆಯೋ ಅದನ್ನೇ ಇದೆಯೆನ್ನೋಣ; ಇಂದು ಭಾರೀಮಾತಾಗಿಹೋಗಿರುವ ಧೈರ್ಯ ಸಾಹಸಗಳ ಮಟ್ಟಿಗೂ ಇದೇ ಮುಂದಾಗಿರಲಿ-ಪ್ರಥಮತಃ ಮನೋಧೈರ್ಯ—ಯಾವ ಲೇಪ, ಅಥವಾ ಉಡುಗೆಯಿಂದಲೂ ಮುಚ್ಚದ ಮನಸ್ಸನ್ನು ಇದ್ದಂತೆ ಮುಂದಿಡುವ ಧೈರ್ಯ-ಮೂಡಿಕೊಳ್ಳಲಿ.

ಸರೋಜಿನಿ ದೇವಿ ಸತ್ತುಹೋದರು; ಇದರಿಂದೇನು ತಪ್ಪಾಯಿತು? ಸಾಯುವಾಗ ಅವರ ಪ್ರಾಯ 70ವರುಷ ತುಂಬಿ ಆಮೇಲೆ 15ದಿನಗಳು ಕಳೆದಿದ್ದುವು. ಇನ್ನೂ ಕೆಲವು ವರುಷ ಬದುಕಬಾರದೆಂದಿರಲಿಲ್ಲ; ಆದರೆ ಅವರು ಬದುಕಿದಷ್ಟು ವರುಷ ಮತ್ತೂ ಬದುಕುತ್ತಿದ್ದರೆ ಇಡೀ ಲೋಕದ ದೀರ್ಘಾಯುಷಿಗಳ ಪ್ರಥಮ ಪಂಗ್ತಿಗೆ ಸೇರುತ್ತಿದ್ದರು; ಈಗಿನಿಂದಾ ವರೆಗಿನ ಕಾಲದಲ್ಲಿ ನಮ್ಮ ನಾಯಕಿ ಸರೋಜಿನಿಗೆ ಮುದುಕಿ ಸರೋಜಿನಿ ಯೆಂಬಷ್ಟೇ ಹೆಸರು ಉಳಿಯುತಿತ್ತು; ಯವ್ವನದಲ್ಲಿದ್ದ ಹುರುಪು, ಕಾರ್ಯಶಕ್ತಿ, ಕೊನೆಯ ಅಂಕದಲ್ಲಿ ಸರೋಜಿನೀದೇವಿಯಲ್ಲಿರಲಿಲ್ಲ; ಅದು ಸ್ವಾಭಾವಿಕ; ಅವರು ದೇಹಧಾರಿಯಾಗಿರುವ ಅಭ್ಯಾಸಕ್ಕೆ ಇನ್ನಷ್ಟು ಕಾಲ್ಯ ಅಂಟಿಕೊಂಡಿದ್ದರೆ, ಮತ್ತೆಲ್ಲರ ಕಣ್ಣಿಗೂ ಅವರ ಆ ಅಭ್ಯಾಸವೊಂದೇ ತೋರಿ

ಬರುತಿತ್ತು ಹೊರತು, ಅವರ ಪ್ರತಿಭೆ, ಕಾರ್ಯಶಕ್ತಿ ಮತ್ತಿತರ ಯೋಗ್ಯತೆಗಳಾವುವೂ ಕಾಣಿಸುತ್ತಿರಲಿಲ್ಲ; ಯಾರಲ್ಲೇ ಆದರೂ ಇವು ಎಲ್ಲಾ ಸಂದರ್ಭಗಳಲ್ಲೂ ಏಕಪ್ರಕಾರವಿರವಂತಹವಲ್ಲ. ಒಪ್ಪವಾಸುವ, ಅಥವಾ ಕುಗ್ಗಿ ಹೋಗುವವುಗಳ ಪೈಕಿ ಕೀರ್ತಿಯಷ್ಟು ನಶಲೀವಾಲು ಮತ್ತೊಂದಿರಲಾರದು. ಒಂದು ಜೀವ ಬದುಕಿಬಂದಷ್ಟುಕಾಲ ಅದರ ಕೀರ್ತಿಯೂ ಬಾಳಿ ಬರುವದಿಲ್ಲ. ಮುಂಬರುವ ಜನಗಣತಿಯಲ್ಲಿ ಭಾರತೀಯರ ಸಂಖ್ಯೆಯೆಷ್ಟೆಂದು ಗೊತ್ತಾಗಬೇಕು-40 ಕೋಟಿಯೆಂದಿಟ್ಟುಕೊಳ್ಳೋಣ; ಸರೋಜಿನಿಯಂಥವರು ಹುಟ್ಟಿದುದನ್ನು ಸತ್ತುದನ್ನು ಮತ್ತು ಈ ಬುಡ-ತುದಿಗಳ ಮಧ್ಯಾವಧಿಯಲ್ಲಿ ಅವರಾಡಿದ ಮಾತುಗಳನ್ನು ಮಾಡಿದ ಕೃತ್ಯಗಳನ್ನು ನಾವೆಲ್ಲರೂ ಅರಿತುಕೊಂಡುದು ಆ ನಲ್ವತ್ತು ಕೋಟಿಯ ಪೈಕಿ ಒಂದು-ಕೇವಲ ಒಂದು-ಅವರಾಗಿದ್ದುದರಿಂದ ಅಲ್ಲ; ಅವರಿಂದ ನಲ್ವತ್ತು ಕೋಟಿಯ ಪಾಲಿನ ಕೆಲಸಗಳಾಗಿದ್ದುದರಿಂದಲೇ. ಸಮಷ್ಟಿಯ ಕಾರ್ಯವು 'ಗಾಂಧೀ ನಿಧಿ'ಯಂತೆ ಪ್ರತಿಯೊಬ್ಬನಿಂದಲೂ ಅವನವನ ಹತ್ತು ದಿನಗಳ ಪಾಲನ್ನು ಸಂಗ್ರಹಿಸಿ, ನಿಜಕ್ಕೂ ಈ ತನಕ ತುಂಬಿದ್ದಲ್ಲ; ಎಲ್ಲರ ಪಾಲಿನ ಕೆಲಸವನ್ನು ಕೆಲವರು ಮಾಡಿದ್ದೇ ಹೆಚ್ಚಿಗೆ. ಅಂತಹ ಕೆಲವೇ ಮಂದಿಯಲ್ಲಿ ಸರೋಜಿನಿದೇವಿಯೊಬ್ಬರು. ಹಾಗೆ ಮಾಡಲಾಗುವ ಶಕ್ತಿ ಯೋಗ್ಯತೆ ಮತ್ತು ಸಂದರ್ಭ ಸೌಕರ್ಯಗಳು ಸರೋಜಿನಿಗಿದ್ದುದರಿಂದಲೇ ಹೀಗಾಯಿತು; ಆದರೆ ಅವರ ಪ್ರಾಯ ಮತ್ತು ಕಾಲ ಇವೆರಡರ ಮೇಲಿಂದಲೂ ಈ ವರೆಗಿದ್ದ ಸರೋಜಿನಿ ಇನ್ನು ಮುಂದಕ್ಕಿರಲು ಸಾಧ್ಯವಿರಲಿಲ್ಲ; ಈ ವರೆಗೆಮಾಡಿಕೊಂಡು ಬಂದುದನ್ನು ಎಂದಿನ ವರೆಗೂ ಮಾಡಿಕೊಂಡು ಹೋಗಲು ಸರೋಜಿನಿಯಿಂದಾಗುತ್ತಿರಲಿಲ್ಲ; ಅವರು ಇನ್ನಿನ್ನು 40 ಕೋಟಿಯಲ್ಲಿ 1 ಆಗಿಯೇ ಉಳಿಯಬೇಕಿತ್ತು; ಆಗ ನಾವೆಲ್ಲರೂ ಅವರನ್ನು ಹಾಗೆಯೇ ಗಣಿಸಿ, ಅಂದರೆ ಗಣಿಸದೇನೇ ಇರಬೇಕಾಗುತಿತ್ತು. 'ಜನತೆ'ಯೆನ್ನುವಾಗ ನಾವೇನು ಅದರಲ್ಲಿ ಪ್ರತಿಯೊಬ್ಬನನ್ನೂ ಗಣಿಸುತ್ತಾ ಹೋಗುತ್ತೇವೆಯೇ? ಸತ್ತುದ್ದು, ಹುಟ್ಟಿದ್ದನ್ನೆಲ್ಲಾ ಲೆಕ್ಕಿಸುತ್ತಿರುವೆವೆ? 'ಸರೋಜಿನಿ'ಯೆಂದರೇನೆಂದು ಈ ತನಕ ಜನತೆಯೆಂತಹ ಪರಿಚಯ ಮಾಡಿಕೊಂಡಿರುವುದೋ ಆ ಸರೋಜಿನಿ

ಸಾಯಲೇಬೇಕಿತ್ತು; ಆ ಸಾವನ್ನು ತಡೆಯುವಂತಹದಾವುದೂ ಇರಲಿಲ್ಲ. ನಿನ್ನೆ ಸರೋಜಿನಿ ನಿಜಕ್ಕೂ ಸತ್ತುಹೋದರು! ಅವರು ಜನ ಸೇವೆಯನ್ನೂ ಜೀವದಂತೆಯೇ ಧಾರಣೆ ಮಾಡಿಕೊಂಡಿದ್ದವರು. ಇನ್ನು ಅದು ಸಾಗದು, ಮತ್ತೆ ಇದೇಕೆ ಸಾಗಬೇಕು, ಎನ್ನುತ್ತಾ ಹೊರಟು ಹೋದರು. ತಪ್ಪಲ್ಲ! ಅವರು ಸಂಪೂರ್ಣ ಸಮಾಧಾನದಿಂದಲೇ ಪ್ರಾಣ ಬಿಟ್ಟಿರಬೇಕು, ಯಾವುದನ್ನು ಬಾಕಿಮಾಡಿ ಹೋದೆನೆಂದು ಅವರ ಆತ್ಮ ಸಂತಾಪಪಡಲಿಕ್ಕಿದೆ ? ಆಧುನಿಕ ಹಿಂದೀ ಮಹಿಳೆಯರ ಹೆಸರಿತ್ತುವದಾದರೆ, ಮುಂದಾಗಿ ಸರೋಜಿನಿ ನಾಮೋಚ್ಚಾರ ಮಾಡಿಕೊಳ್ಳಬೇಕು- ಭಾರತೀಯರು ಮಾತ್ರವಲ್ಲ, ಲೋಕವೇ! ರಾಷ್ಟ್ರದ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಭಾರತೀಯ ಮಹಿಳೆಯೆಷ್ಟು ಮಾಡಬೇಕು ಮತ್ತು ಮಾಡಲು ಸಾಧ್ಯವೋ ಅಷ್ಟನ್ನೂ ಸರೋಜಿನಿ ಮಾಡಿದ್ದಾರೆ; ಏನಾಗಬೇಕೆಂದು ಇಷ್ಟೆಲ್ಲಾ ಮಾಡಿದ್ದರೋ ಅದೀಗ ಆಗಿದೆ; ಒಂದು ಹಕ್ಕಿಗಾಗಿ ಛಲ ತೊಟ್ಟು ಸಾಧಿಸುವವರಿಗೆ ಆ ಹಕ್ಕನ್ನು ಚಾಲುಮಾಡುವ ಸಂದರ್ಭ ದೊರಕುವದು ಅತ್ಯಪರೂಪ. ಸರೋಜಿನಿಗೆ ಅದೂ ದೊರೆತಿದೆ; ಸಾಯುವಾಗ ಅವರು ಸ್ವತಂತ್ರಭಾರತದ ಸಂಯುಕ್ತಪ್ರಾಂತ್ಯದ ಗವರ್ನರ್. ಪ್ರಥಮಪಂಕ್ತಿಯ ದೇಶಭಕ್ತೆ--ಅಗ್ರಗಣ್ಯ ಮಹಿಳಾ ಮುಂದಾಳು--ಭಾರತಕೋಗಿಲೆ--ಸ್ವತಂತ್ರಭಾರತದ ಪ್ರಥಮಮತ್ತು ಏಕಮಾತ್ರ ಮಹಿಳಾ ಗವರ್ನರ್, ಎಲ್ಲಾ ಇವರೇ. ಇಷ್ಟನ್ನೆಲ್ಲಾ ಗಳಿಸಿದ್ದಾಯಿತು; ಎಪ್ಪತ್ತು ವರುಷ ಬಾಳಿದ್ದಾಯಿತು; ಇನ್ನೂ "ಆ ಆತ್ಮಕ್ಕೆ ಶಾಂತಿಯಿರಲಿ" ಎಂದು ಯಾರಾದರೂ ಹಾರೈಸಬೇಕೆಂದೇನು? ಶಾಂತಿಯೆಂಬುದೊಂದು ಇರುವುದು ಹೌದಾದರೆ, ಅಲ್ಲಿ ಇರಲೇಬೇಕು.

ಆದ್ದರಿಂದ ನಾವು ಸರೋಜಿನಿಯ ಆತ್ಮದಕಡೆಗೆ ರವಾನಿಸಬೇಕಾದುದೇನೂ ಇಲ್ಲ; ಅಲ್ಲಿಂದ ಆಮದುಪಡಿಸಿಕೊಳ್ಳಲಿಕ್ಕೇನೇ ಇದೆ. ಹಾಂ?! ಸರೋಜಿನಿ ಕೂಡಾ ಸತ್ತುಹೋದರು. ಅವರು ಸತ್ತ ಸುದ್ದಿಯನ್ನು ನಾವು ನಂಬಬೇಕು; ಆ ಸಾವನ್ನು ನಂಬಿಕೊಳ್ಳಬೇಕು. ನಾವೂ ಒಂದು ದಿನ ಸಾಯುವವರೆಂಬುದು ಎಲ್ಲರಿಗೂ ಗೊತ್ತಿದ್ದದ್ದೇ. ಆದರೂ ಆತ್ಮಹತ್ಯೆಗಿಳಿಯುವವರನ್ನು ಬಿಟ್ಟರೆ ಮಿಕ್ಕವರು ಸಾವು ನಮ್ಮ ಕೆಲಸವಲ್ಲ,

ಸಾಯುವ ವರೆಗೆ ಬದುಕುವದಷ್ಟೇ ನಮ್ಮ ಕರ್ತವ್ಯವೆಂದು ತಿಳಿದಿದ್ದೇವೆ. ಸ್ವತಃ ನಾವು ಮತ್ತು ನಮ್ಮವರು ಬಾಳಬೇಕು—ನಾವು ಬಾಳಿ ಎಲ್ಲರನ್ನೂ ಬದುಕಿಸಬೇಕು ಎಂಬುದರಲ್ಲೇ ನಮ್ಮ ಕೀಳು--ಮೇಲು ಇದೆ. ಇವೆರಡು ವಿಧಾನಗಳಲ್ಲೂ ಸಾವಿನ ನೆನಪು ಸಾಕಷ್ಟಿಲ್ಲ. ಬಾಳಬೇಕು ಎಂಬಾಸಕ್ತಿಯಿರುವಂತೆಯೇ 'ಸಾಯುವವರೆಗಿನ ಬಾಳುವೆ ಬಾಳಬೇಕು' ಎಂಬ ಸ್ಪಷ್ಟ ತಿಳುವಳಿಕೆಯಿರುವವರು ಅಪರೂಪ; ಇವೆರಡು ಭಾವನೆಗಳಲ್ಲಿ ವ್ಯತ್ಯಾಸವಿದೆ. ಮೊದಲನೆಯದರಲ್ಲಿರದ ಒಂದು ನೆನಪು ಎರಡನೆಯದರಲ್ಲಿದೆ. ಬದುಕಬೇಕು ಎಂಬಷ್ಟನ್ನೇ ಕಟ್ಟಿಕೊಂಡವರು 'ಎಲ್ಲಿ ವರೆಗೆ?' ಎಂಬುದನ್ನು ಜ್ಞಾಪಿಸಿಕೊಳ್ಳುವದಿಲ್ಲ; ಸರೋಜಿನಿ ದೇವಿಯಂಥವರು ಸತ್ತಾಗ ಮಾತ್ರ 'ಸಾಯುವ ವರೆಗೆ' ಎಂಬ ನೆನಪು ಅವರಿಗೂ ಬರಬಹುದು. ಆದರೆ ಇಂಥವರು ಸಾಯುವ ವರೆಗೂ—ಯಾಕೆ? ಸಾಯುವಾಗಲೂ—ಬದುಕಬೇಕು ಎಂಬ ಆಶೆಯಲ್ಲೇ ಇರುತ್ತಾರೆ. ಸ್ವಭಾವವಿರಲಿ, ಆಚಾರ ವಿಚಾರಗಳಿರಲಿ, ಜೀವನದಲ್ಲಿ ಹಾಸುಹೊಕ್ಕಾಗಿ ಆದಿಯಿಂದಲೂ ಸೇರಿಕೊಂಡು ಬಂದುದು ಜೀವನದೊಂದಿಗೇನೇ ಕಡಿದು ಹೋಗಬೇಕಲ್ಲದೆ, ಆ ಕಡಿತದ ದೂರದ ನೋಟದಿಂದ ಅಥವಾ ಅದರ ಸಾಮೀಪ್ಯದಿಂದ ಅದು ನಾಯುವಾಗುವಂತಹದಲ್ಲ. ಹೀಗಾಗಿ ಇಂಥವರು ಬಾಳುವೆಗಾಗಿ--ಸಾವುಗಡಿಯ ನೆನಪಿರುವ ಬಾಳುವೆಗಾಗಿ ಅಲ್ಲ, ಹೋದಲ್ಲಿ ವರೆಗೆಂಬಂತೆ-ಇರುತ್ತಾರೆ. ಬಾಳುವವನ ಗುರಿಯೇನಿದ್ದರೂ ಬಾಳುವೆಯ ಗುರಿ ಮರಣ; ಆ ಗುರಿಯನ್ನು ಎಂದಾದರೊಮ್ಮೆ ಉಪಚಾರಕ್ಕಷ್ಟೇ ಸ್ಮರಿಸುವವರೂ ಜೀವನದ ಗುರಿಯನ್ನು ಮರೆತವರೇ. ಬದಲಿಗೆ ಮರಣ ಸರಹದ್ದಿಗೆ ಹೋಗಿ ನಿಲ್ಲುವ ಪ್ರಯಾಣ ತಮ್ಮದೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡವರಿಗೆ,ಆ ಗಡಿಯ ವರೆಗಿರುವ ಕ್ಷೇತ್ರವನ್ನೂ ಅಲ್ಲಿ ಮುಟ್ಟುವವರೆಗಿನ ಕಾಲವನ್ನೂ ಸಾರ್ಥಕಗೊಳಿಸುವುದೊಂದೇ ತಮ್ಮ ಕರ್ತವ್ಯವೆಂಬ ಪ್ರಜ್ಞೆಯಿರುತ್ತದೆ. ಆ ಗಡಿಯು ಇಲ್ಲೇ ಇರಬಹುದಾದ್ದರಿಂದ ನಮ್ಮ ಜನ್ಮ ಸಾರ್ಥಕತೆಯೂ ಈಗಲೇ ಆಗಬೇಕೆಂಬ ಜಾಗೃತಿ ಹುಟ್ಟುತ್ತದೆ. ಸಂಸ್ಕೃತಿ, ಮನೋಗತಿ ಮತ್ತು ಸಂದರ್ಭ ಸೌಕರ್ಯಗಳ ಹೆಚ್ಚು ಕಡಿಮೆಯನ್ನಾಧರಿಸಿ, ಈ ಜನ್ಮಸಾರ್ಥಕತೆಯ ಧ್ಯೇಯ, ಧೋರಣೆ, ರೀತಿ

ನೀತಿಗಳೂ ಭಿನ್ನವಾಗಿರಬಹುದು. ಮಾನುಷತ್ವ ವಿಕಾಸಗೊಳ್ಳದವನು ತನ್ನ ಬಾಳುವೆಯ ಗಡಿಯ ನೆನಪಿಟ್ಟುಕೊಂಡರೂ ಅಷ್ಟೆ, ತನ್ನ ಕಾರ್ಯಕ್ಕೊಂದು ಗುರಿಯಿಟ್ಟುಕೊಂಡರೂ ಅದೇ! ಆ ಮಾತು ಬೇರೆ. ಯಾವುದೇ ಮಟ್ಟದಲ್ಲಿರುವ ಯಾರಿಗೇನೇ ಆದರೂ ಲಕ್ಷ್ಯದಲ್ಲಿರಬೇಕಾದ ವಿಷಯವೆಂದರೆ ಬಾಳುವೆಯ ಗಡಿ; ಮರಣ. 'ನಾವು' ನಮ್ಮಲ್ಲಿ ಹೇಗಿರುತ್ತದೋ ಹಾಗೆಯೇ 'ಸಾವು' ಕೂಡಾ ಒಂದು ಪ್ರಜ್ಞೆಯಾಗಿ ಉಳಿದುಕೊಂಡರೆ ನಿಜಕ್ಕೂ ಪ್ರಪಂಚದ ಇಂದಿನ ಎಷ್ಟೋ ದುಷ್ಕೃತ್ಯ, ದುರಾಚಾರಗಳು ನಿವಾರಣೆಗೊಂಡಾವು; ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ, ಕ್ಷಿಪ್ರಗತಿಯಿಂದ, ಸಾವಧಾನ ರೀತಿಯಿಂದ ಇಂದು ನಡೆಯುತ್ತಿರುವ ಕೊಲೆಗಳೆಲ್ಲಾ ನಿಂತುಹೋದಾವು; ಸಾವು ಸ್ವಾಭಾವಿಕವನ್ನಿಸೀತು. ಸಾವಿನ ಮೇಲೂ ಬೀಳುತ್ತಿರುವ ಒತ್ತಾಯ ಮತ್ತು ಸಾವಿನ ನೋವು, ಎಲ್ಲವೂ ಮಾಯವಾದಾವು. ಆದ್ದರಿಂದ ಸರೋಜಿನಿದೇವಿಯಂಥವರ ಮರಣದಿಂದ ನಾವು ಕಲಿತುಕೊಳ್ಳಬೇಕಾದುದು ನಮಗೂ ಸಾವಿದೆ ಎಂಬುದನ್ನೇ; ಅವರು ಸತ್ತಂತೆಯೇ ಸಾಯಲಿರುವ ನಾವು ಅವರು ಜೀವನದಲ್ಲಿದ್ದಂತೆಯೇ ಜೀವನದಲ್ಲಿರಬೇಕು—ಜೀವನ ಸಾರ್ಥಕತೆಯ ಕೆಲಸ ಮಾಡುತ್ತಿರಬೇಕು ಎಂಬುದನ್ನು ಕಲಿತುಕೊಂಡರಾಯಿತು. ಸರೋಜಿನೀದೇವಿಯ ಜೀವನದ ಪ್ರತಿಬಿಂಬವನ್ನು ಇಲ್ಲಿ ಮೂಡಿಸಲು ಪ್ರಯತ್ನಿಸಿದ್ದೇವೆ. ಈ ಹೆಣ್ಮಣಿಯ ಜೀವನ ಚರಿತ್ರೆ ಬಹಳದೊಡ್ಡದು; ಅದನ್ನಿಲ್ಲಿಯ ಕೆಲವೇ ಪುಟಗಳಿಗಾಗುವಂತೆ ಇಷ್ಟು ದೂರದಲ್ಲಿರುವವರು ಬರೆಯುವದೂ ಗೌರೀಶಂಕರ ಶಿಖರದ ಭಾವಚಿತ್ರವೆತ್ತುವದೂ ಒಂದೇ. ಇದನ್ನೋದುವವರು ಆ ಭವ್ಯಶಿಖರ ಹೇಗೆ ಕಾಣುತ್ತದೆ ಎಂಬುದರೊಡನೆ ಈ 'ಫೋಟೋ'ದಲ್ಲಿ ಅದೆಷ್ಟು ಬರಲು ಸಾಧ್ಯವೆಂಬುದನ್ನೂ ಗ್ರಹಿಸಿಕೊಂಡರಾಯಿತು.

ತಂದೆ—ತಾಯಿ

ಈ ಹೆಣ್ಣು ಹುಟ್ಟಿದುದು 1879ನೇ ಇಸವಿ ಫೆಬ್ರವರಿ 13ನೇ ತಾರೀಕಿನಲ್ಲಿ. ಧಾಕ್ಕಾ ಹೈದರಾಬಾದಿನಲ್ಲಿ. ತಂದೆ ಅಘೋರನಾಥ ಚಟ್ಟೋಪಾಧ್ಯಾಯ; ತಾಯಿ ವರದಸುಂದರಾ ದೇವಿ. ಇವರು

ಶ್ರೇಷ್ಠವರ್ಗಕ್ಕೆ ಸೇರಿದ ಬ್ರಾಹ್ಮಣರು. ಪ್ರಾಂತ್ಯದಲ್ಲೆಲ್ಲಾ ಪ್ರಸಿದ್ಧ, ಮತ್ತು ಅಖಿಲ ಭಾರತದವರಿಗೂ ಪರಿಚಿತವಿರುವ ಬಂಗಾಳದ ಚಟರ್ಜಿ ಗೋತ್ರದವರು. ಹೆತ್ತವರ ಗುಣ ಮಕ್ಕಳಿಗೂ—ಲೋಕದಲ್ಲೇ ಸರ್ವಸಾಮಾನ್ಯವಾಗಿರುವ ಕೆಲವೇ ಸಂಪ್ರದಾಯಗಳಲ್ಲಿ ಇದೊಂದು. ಸರ್ವತ್ರ ಪರಿಮಳ ಹಬ್ಬಿಸಿರುವ ಈ ಪಾರಿಜಾತ ವೃಕ್ಷವು ಅದಕ್ಕನುಗುಣವಾದ ಕ್ಷೇತ್ರದಲ್ಲಿ ಮೊಳೆತು, ಉಚಿತ ಆರೈಕೆ ಪಡೆದು ಬೆಳೆದು ಬಂದುದರಿಂದಲೇ ಹೀಗಾಯಿತು. ಡಾ। ಅಘೋರನಾಥ ಚಟರ್ಜಿಗಳ ಮನೆತನವು ಶಾಸ್ತ್ರ ಪಾಂಡಿತ್ಯ, ಧರ್ಮ ತಿರುಳಿನ ಅನುಭವಾನುಭೋಗ ಮತ್ತು ಸುಸಂಸ್ಕಾರಕ್ಕೆ ಬಹಳ ವರುಷಗಳಿಂದಲೂ ಹೆಸರಾಗಿತ್ತು. ನಮ್ಮ ವೇದ ಶಾಸ್ತ್ರ ಪುರಾಣಗಳು ಬುದ್ಧಿವಂತರ ಸಂಖ್ಯೆಯನ್ನು ಹೆಚ್ಚಿಸಿವೆ. ಈ ಜಾಣರ ದೆಸೆಯಿಂದ ಶಾಸ್ತ್ರ ಪುರಾಣಗಳಿಗೂ ಪ್ರಸಿದ್ಧ ‘ಮೇ 16ರ ಘೋಷಣೆ’ಯ ಸ್ಥಾನವೇ ದೊರೆತಂತಿದೆ. ಪ್ರಾಂತಿಕ ಗುಂಪಿನಲ್ಲಿ ಸೇರುವ ಅಥವಾ ಸೇರದಿರುವ ಹಕ್ಕು ಈ ಘೋಷಣೆಯನ್ವಯ ಪ್ರತಿಯೊಂದು ಪ್ರಾಂತ್ಯಕ್ಕಿದೆ, ಎಂದು ಕಾಂಗ್ರೆಸಿಗರಂದಿದ್ದರೆ, “ಸಾಧ್ಯವೇ ಇಲ್ಲ; ಪ್ರತಿಯೊಂದು ಪ್ರಾಂತ್ಯವೂ ಗುಂಪಿನೊಳಗೆ ಸೇರಲೇಬೇಕೆಂದು ಅದು ಕಡ್ಡಾಯಗೊಳಿಸುತ್ತದೆ” ಎಂದು ಲೀಗಿನವರು ಹೇಳಿದ್ದುಂಟಷ್ಟೆ? ಶಾಸ್ತ್ರ ಪುರಾಣಗಳ ಶ್ಲೋಕ ವಾಕ್ಯಗಳಿಗೆ ಅಂತಹ ಪರಸ್ಪರ ವಿರುದ್ಧಾರ್ಥಗಳು ಹುಟ್ಟಿಕೊಂಡಾಗಲೆಲ್ಲಾ, ಆಸುಪಾಸಿನವರು, ದೂರದೂರದವರು ಅಭಿಪ್ರಾಯ ಕೇಳಲೋಡಿ ಬರುತ್ತಿದ್ದುದು ಈ ಅಟ್ಟೆಗಳ ಸನ್ನಿಧಾನಕ್ಕೆ; ಡಾ। ಅಘೋರನಾಥ ಚಟರ್ಜಿಗಳ ಮನೆಗೆ. ಸರೋಜಿನಿಯಂತಹ ದೇಶಭಕ್ತೆಯನ್ನು ಪಡೆವ ಸುಕೃತವೊಂದೇ ಚಟರ್ಜಿಗಳ ಆಯುಷ್ಯದಲ್ಲಾಗಿದ್ದುದಲ್ಲ; ಅವರು ಸ್ವತಃ ಸುಕೃತ ಜೀವಿ. ಆ ಚಟರ್ಜಿವಂಶ ಕೀರ್ತಿಗೆ ಮುಕುಟಪ್ರಾಯವಾಗಬಲ್ಲ ಪಾಂಡಿತ್ಯ, ಪ್ರತಿಭೆ ಅಘೋರನಾಥರಲ್ಲಿದ್ದುವು. ಅತ್ಯಂತ ಸಾತ್ವಿಕಬುದ್ಧಿಯ ಮನುಷ್ಯ. ಅವರ ಸಹನೆಯು ಹೆಸರಾದುದು; ಸರ್ವಸಾಧಾರಣ ಮನುಷ್ಯನೊಬ್ಬನು ಎದೆಬಡಿದುಕೊಳ್ಳಬೇಕಾಗುವಂತಹ ಕಠಿಣ ಸನ್ನಿವೇಶಗಳೊದಗಿದಾಗ ಕೂಡಾ ಅಘೋರನಾಥರ ಎದೆಯು ಉಬ್ಬಸದಿಂದ ಏರಿಳಿಯುವುದನ್ನು ಕಂಡವರಿಲ್ಲವೆನ್ನುತ್ತಾರೆ. ಸದಾ

ನಗುತ್ತಲೇ ಇರಬೇಕು ಈ ಮನುಷ್ಯನಿಗೆ. ಅದು ನಿಶ್ಚಯದಲ್ಲಿ ಶಾಂತ ಹಾಲ್ಗಡಲಿನಂತಿರುತ್ತದೆ; ಆದರೆ ಆಗಾಗ ಪ್ರಚಂಡ ತೆರೆಗಳನ್ನೆಬ್ಬಿಸುತ್ತಾ ಭೋರ್ಗರೆದುಬಿಡುತ್ತದೆ. ಅಘೋರನಾಥರ ವಿಯೋಗವಾದಾಗ ಬಂಗಾಳಿಗಳಿಗೆ, ಒಂದು ತಮ್ಮ ನಾಥ ಹೋದನೆಂದು, ಮತ್ತೊಂದು ಅವರ ನಗೆ ಹೋಯಿತೆಂದು, ಹೀಗೆ ಇಮ್ಮಡಿ ದುಃಖವಾಗಿತ್ತು. ಒಳ್ಳೇ ಅನುಭವಿ, ಗಾಢಚಿಂತಕ, ದೊಡ್ಡ ಪಂಡಿತ--ಇಷ್ಟಿದ್ದೂ ಎಳೇ ಮಗುವಿನಂತಹ ಸರಳ ಶುದ್ಧ ಮನಸ್ಸು. ಆದ್ದರಿಂದ ಅವರು ಜನರ ಗೌರವ ಮತ್ತು ಪ್ರೇಮ ಸಂಪಾದಿಸಿದ್ದರು. ಮನೆಯಲ್ಲಿ ಯಾವಾಗಲೂ ಸಲಹೆ ಕೇಳಲು—ಸಖ್ಯಾನಂದವನುಭವಿಸಲು—ಸಹಾಯ ಯಾಚಿಸಲು—ಶಾಸ್ತ್ರ ತರ್ಕ ಮಾಡಲು ಬರುವವರ ಗುಂಪು ತಪ್ಪಿದ್ದಲ್ಲ. ಮನಸ್ಸಿನಲ್ಲಿ ಶಾಸ್ತ್ರ ಪುರಾಣಗಳ ಮುದ್ದೆಗಳನ್ನು ಜಗಿಯುವುದೂ ತನ್ನ ನೆಚ್ಚಿನ ರಸಾಯನ ಶಾಸ್ತ್ರದ ಸಾರವನ್ನು ಸವಿಯುವುದೂ ಇದ್ದದ್ದೇ. ರಸಾಯನ ಶಾಸ್ತ್ರಾಭ್ಯಾಸಕ್ಕಾಗಿ ಯುರೋಪಿಗೆ ಹೋಗಿ ಎಡಿನ್‌ಬರೋ ಮತ್ತು ಜರ್ಮನಿಯ ಬಾನ್ ವಿಶ್ವವಿದ್ಯಾಲಯಗಳಲ್ಲಿ ಕಲಿತಿದ್ದರು. 'ಡಾಕ್ಟರ್ ಓಫ್ ಸಯನ್ಸ್' ಪದವಿ ಗಳಿಸಿದ್ದರು. ಅಲ್ಲಿಂದ ಮರಳಿದವರು ಹೈದರಾಬಾದಿನಲ್ಲಿ ನೆಲಸಿ, ಅಲ್ಲಿ ನೈಜಾಮ್ ಕಾಲೇಜನ್ನು ಸ್ಥಾಪಿಸಿದರು. ವೈಜ್ಞಾನಿಕಶೋಧನೆ ಮತ್ತು ಶೈಕ್ಷಣಿಕ ಪ್ರಯೋಗಗಳೇ ಡಾ|ಅಘೋರನಾಥರ ಜೀವನಧ್ಯೇಯ ಮತ್ತು ಉದ್ಯೋಗಗಳಾಗಿದ್ದುವು.

ವರದ ಸುಂದರಾದೇವಿ ಆದರ್ಶ ಹಿಂದೀ ಮಹಿಳೆ. ಆಕೆ ಶಿಕ್ಷಿತೆ, ಸುಸಂಸ್ಕೃತೆ; ತನ್ನ ಕಾಲದ ಹೊಸ ವರ್ತನೆಗಳ ಕಡೆಗೆ ವಕ್ರ ನೋಟವಿದ್ದವರಲ್ಲ. ಆದರೆ ಭಾರತೀಯ ಸ್ತ್ರೀಯ ಸರ್ವಸ್ವವಾಗಿರುವ ಪತಿಭಕ್ತಿ ಮತ್ತು ಪುತ್ರವಾತ್ಸಲ್ಯಗಳು ಆ ಸ್ತ್ರೀ ಹೃದಯದಲ್ಲಿ ತುಂಬಿ ತುಳುಕುತಿದ್ದುವು. ಧರ್ಮ ಶಾಸ್ತ್ರಗಳ ಅಂತರಂಗವರಿಯಲು ಡಾ| ಅಘೋರನಾಥರ ಕಡೆಗೆ ಕೈತೋರಿಸಬೇಕಾಗಿದ್ದರೆ, ಸ್ತ್ರೀಧರ್ಮದ ಆದರ್ಶ ಮೂರ್ತಿಯಾಗಿ ಅವರ ಪತ್ನಿಯನ್ನು ತೋರಿಸಬಹುದಿತ್ತು. ಪತಿ ಸೇವೆ ಮತ್ತು ಮಕ್ಕಳ ಆರೈಕೆಯಿಂದಲೇ ತನ್ನ ಹೆಣ್ಣುಜನ್ಮದ ಸಾರ್ಥಕತೆಯನ್ನು ಗಳಿಸಿದವರು; ಒಂದು ಸಾಮಾನ್ಯ ಹೆಣ್ಣು ಅದಕ್ಕಿಂತ ಹೆಚ್ಚಿನ

ದೇನನ್ನು ಮಾಡಲು ಸಾಧ್ಯವೆಂಬ ಪ್ರಶ್ನೆಯನ್ನು ವರದ ಸುಂದರಾದೇವಿಯು ಮಟ್ಟಿಗೆ ಕೇಳಲಾಗುವದಿಲ್ಲ. ಆಕೆ ಸ್ವತಃ ಕವಯಿತ್ರಿಯಿದ್ದರು. ಬಂಗಾಳಿಯಲ್ಲಿ ಹಲವು ಕವನಗಳನ್ನು ಕಟ್ಟಿದ್ದರು. ಆದರೆ ಅವರ ಸುಖ, ಕೀರ್ತಿ, ಆಸಕ್ತಿ, ಅಭಿರುಚಿಯೆಲ್ಲವೂ ಹೆಚ್ಚಾಗಿ ತಾಯ್ತನದಲ್ಲಿಯೇ.

ಈ ಚಟರ್ಜಿ ಜತೆಯಂತಹ ಸಮಾನ ಜೋಡಿ ಅಪರೂಪ; ಎಲ್ಲವನ್ನೂ ಹೀಗೆ ಜತೆಗೂಡಿಸಲು ಸಾಧ್ಯವಿರುತಿದ್ದರೆ, ಭಾವೀ ಜನಾಂಗದ ಅಭಿವೃದ್ಧಿಗೆಂದು ಬೇರೇನನ್ನೂ ಮಾಡಬೇಕೆಂದಿರಲಿಲ್ಲ. ಗಂಡ ಸಾತ್ವಿಕ ಶಿರೋಮಣಿ ಮತ್ತು ಪಂಡಿತನಾಗಿದ್ದರೆ ಹೆಂಡತಿ ಸಾಧ್ವಿಶಿಖಾಮಣಿ ಮತ್ತು ಕುಟುಂಬಸೇವಕಿ. ಸರೋಜಿನೀದೇವಿ, ಹರೀಂದ್ರನಾಥ ಚಟ್ಟೋಪಾಧ್ಯಾಯರಂತಹ ಪ್ರತಿಭಾವಂತರನ್ನು, ಕವಿ, ಕವಯಿತ್ರಿಯರನ್ನು ಪಡೆಯುವ ಭಾಗ್ಯ ಬರಬೇಕು ಇಂತಹ ದಂಪತಿಗಳಿಗೇನೇ. ತಂದೆಯ ಜನೋಪಕಾರ ಬುದ್ಧಿ ಮತ್ತು ಆತ್ಮ ಬಲ, ತಾಯಿಯ ಕವಿತಾ ಶಕ್ತಿ ಮತ್ತು ಸೇವಾಬುದ್ಧಿ ಮಿಶ್ರಗೊಂಡು ಈ ಹೆಣ್ಣು ಗಂಡು ಮಕ್ಕಳಿಗೂ ಇಳಿದಿದ್ದಿತು. ಸರೋಜಿನಿ ಮತ್ತು ಹರೀಂದ್ರನಾಥರಲ್ಲಿ, ಅವರ ತಂದೆ ತಾಯಿಗಳಲ್ಲಿರದ ದೋಷಗಳೇನಾದರೂ ತೋರಬಂದುದಿದ್ದರೆ, ಅದಕ್ಕೆ ಈ ಮಕ್ಕಳು ತಮ್ಮ ಹಿರಿಯರದಾಗಿರದ, ಮತ್ತು ಆ ಹಿರಿಯರು ತರಬೇತಿ ಕೊಟ್ಟಿರದ ವಿಸ್ತಾರ ಕಾರ್ಯರಂಗಕ್ಕೆ ಪ್ರವೇಶಿಸಿದುದೇ ಕಾರಣ; ಅವು ಸಂಗದೋಷದಿಂದ ಬಂದವುಗಳೇ ಹೊರತು ಹುಟ್ಟು ಗುಣವಾಗಿ ಅಲ್ಲ. ಆದರೆ ಈ ಮಕ್ಕಳ ವಿದ್ವತ್ತು, ಪ್ರತಿಭೆ ಮತ್ತು ಜನಸೇವಾ ಗುಣ ಮೊದಲಾದುವು ತಾಯಿ ತಂದೆಯಿಂದಲೇ ಮೂಡಿಬಂದವುಗಳು; ಇವರ ಕಾಲದಲ್ಲಿ ಇವರಿಗೆ ದೊರೆತ ವಿಶೇಷ ಸಂದರ್ಭಗಳು, ವಿಸ್ತಾರರಂಗ, ಮತ್ತು ಶಿಕ್ಷಣಾನುಭವಗಳಿಂದ ಆ ಪಿತೃಮಾತೃದತ್ತ ಸಂಪತ್ತು ವರ್ಧಿಸಿಂಬಹುದು; ಅಷ್ಟೆ.

ಬಾಲ್ಯ—ತಾರುಣ್ಯ

ಮಗು ಸರೋಜಿನೀ ಚಟ್ಟೋಪಾಧ್ಯಾಯಳು ಕಾಡಿನ ಹಕ್ಕಿಯಂತೆಯೂ ಅಲ್ಲ-ಗೂಡಿನ ಗಿಣಿಯಂತೆಯೂ ಅಲ್ಲ—ಸ್ವೇಚ್ಛಾ ಹಾರಾಟ ಸ್ವಾತಂತ್ರ್ಯವಿರಬೇಕು, ಆದರೆ ಭಾರತಾಂಬೆಯ ಮಾಂಗ್ಯ ಅರಗಿಣಿಯಾಗುವ ಭಾಷೆ ಬರಬೇಕು ಎಂಬಂತೆ ಸ್ವತಂತ್ರೋದ್ಯಾನದಲ್ಲಿ ಬೆಳೆದ

ಮರಿಗಳೆ. ಭಾವೀ ಜನಾಂಗವನ್ನು ಬೆಳೆಸುವ ಕ್ರಮವನ್ನೇ ಅರಿಯದವರೆಂಬ ಆರೋಪವನ್ನು ನಾವು ಈ ಕಾಲದ ತಂದೆತಾಯಿಗಳ ಮೇಲೆ ಹೊರಿಸುವದಿದೆ; ಆದರೆ ಆ ಆರೋಪವು ಈಗಿನವರ ಮೇಲೆಯೇ ನಿಲ್ಲದೆ ತಲೆಯಿಂದ ತಲೆಗೆ ಎಷ್ಟು ದೂರದ ವರೆಗೆ ಹೋಗುವಂತಹದೋ ಹೇಳಲಾಗುವದಿಲ್ಲ. ಮಕ್ಕಳನ್ನು ಸಾಕಬೇಕಾದ ರೀತಿಯಲ್ಲಿ ಸಾಕುವವರೂ ಸುಶಿಕ್ಷಿತರು, ಸುಸಂಸ್ಕೃತರಿರಬೇಕು; ಸರೋಜಿನಿಯನ್ನು ಬೆಳೆಯಿಸಿದಂತೆ ಪೋಷಿಸಬೇಕು ಡಾ| ಅಘೋರನಾಥ ದಂಪತಿಗಳಂಥವರೇ; ಡಾ| ಅಘೋರನಾಥ ಚಟ್ಟೋಪಾಧ್ಯಾಯ ಮತ್ತು ಶ್ರೀಮತಿ ವರದ ಸುಂದರಾ ದೇವಿ ಚಟ್ಟೋಪಾಧ್ಯಾಯರ ಪೋಷಕರೂ ಸುಸಂಸ್ಕೃತರೇ; ಇಲ್ಲವಾದರೆ ಈ ದಂಪತಿಗಳೂ ಬೇರೆ ವಿಧದವರಾಗುತಿದ್ದರು;ಇನ್ನು ಇವರನ್ನು ಹೀಗೆ ಮಾಡಿದವರನ್ನು ತರಬೇತು ಮಾಡಿದ ಅವರಹಿರಿಯರು................ಇದೇ ರೀತಿ ಆ ಕೀರ್ತಿ ಈ ತಲೆಯಿಂದ ಹಿಂದಿನ ತಲೆ, ಅಲ್ಲಿಂದ ಅದಕ್ಕೂ ಹಿಂದಿನ ತಲೆ,.......ಹೀಗೆ ಹಿಂದೆಹಿಂದೆ ಹೋಗುತ್ತದೆ. ಮಕ್ಕಳನ್ನು ಯೋಗ್ಯ ರೀತಿಯಿಂದ ಆರೈಕೆ ಮಾಡದವರು ಎಂಬ ಅಪವಾದಕ್ಕೂ ಇದೇ ಹಾದಿ. ಪಾರಂಪರ್ಯವಾಗಿ ಬಂದ ಸಂಸ್ಕೃತಿ ಮತ್ತು ಸ್ಥಿತಿಗತಿಗಳೇ ಇಲ್ಲಿ ಪರಿಣಾಮರೂಪದಿಂದ !ಪ್ರತಿಬಿಂಬಿಸುತ್ತವೆ. ಸಾಮಾಜಿಕ ಸ್ಥಿತಿಗತಿಗಳು ಅಡಿಮೇಲಾಗಿ ಸರ್ವಸಮಾನ ಹಿತ ಸಾಧಿಸುವ ವ್ಯವಸ್ಥೆ ಬರುವ ವರೆಗೂ ಈ ಪರಂಪರಾಗತ ವ್ಯತ್ಯಾಸಗಳಿರುವಂತಹವೇ. ಬುದ್ಧಿ, ಜೀವನ, ಎರಡರಲ್ಲಿಯೂ ದಾರಿದ್ರ್ಯವಿರುವವರು ತಾವಿರಬೇಕಾದಂತೆ ಇರುವುದಿಲ್ಲ; ಅಂದ ಮೇಲೆ ತಮ್ಮ ಮಕ್ಕಳನ್ನು ಅವರು ಸಾಕಬೇಕಾದಂತೆ ಸಾಕುವುದಿಲ್ಲವೆಂಬುದು ಸ್ಥಿತಿನಿರೂಪಣೆ ಹೊರತು, ಆ ಪಾಪದವರ ಮೇಲಿನ ಆರೋಪವಾಗುವದು ಹೇಗೆ? ಸರೋಜಿನಿಯಂತಹ ಸುದೈವಿಗಳು ಕೆಲವರಿದ್ದಾರೆ— ಡಾ|ಅಘೋರನಾಥ ದಂಪತಿಗಳಂತಹ ಸುಜ್ಞಾನಿ ಶ್ರೀಮಂತರಲ್ಲಿ ಹುಟ್ಟಿದವರು; ಅವರ ಹುಟ್ಟಿನೊಂದಿಗೆ ಬೆಳವಣಿಗೆ ಕೂಡಾ ಇರಬೇಕಾದಂತೆ ಇರುತ್ತದೆ. ಭವ್ಯ ಭಾವೀಜೀವನದತ್ತ ಅವರನ್ನು ಮುಂದೂಡುತ್ತಾ ಹೋಗುವಂತಹದಿರುತ್ತದೆ. ಈ ಧುರೀಣೆ ಭೂಮಿಗೆ ಬರುವಾಗಲೇ ಆ ಭಾಗ್ಯವನ್ನು ಪಡಕೊಂಡು ಬಂದಿದ್ದಳು; ಹಾಗೆಯೇ ಬಾಳಿದಳು.

ಈಕೆ ಪ್ರಥಮ ಪುತ್ರಿ. ಬೆನ್ನಲ್ಲಿ ಬಂದ ಮೂವರು ಅನುಜಾನುಜೆಯರೂ ಪ್ರಸಿದ್ಧ ತ್ರಿಮೂರ್ತಿಗಳೇ; ಉಗ್ರ ರಾಜಕೀಯ ಕ್ರಾಂತಿಗಾರನಾಗಿ ಜರ್ಮನಿಗೆ ಗಡೀಪಾರು ಮಾಡಲ್ಪಟ್ಟಿದ್ದ ವೀರೇಂದ್ರನಾಥ ಚಟ್ಟೋಪಾಧ್ಯಾಯ ಗಂಡುಗಳಲ್ಲಿ ಹಿರಿಯ; ಎರಡನೆಯವರೇ, ಶ್ರೀಮತಿ ಕಮಲಾದೇವಿಯವರ ಪತಿ (ವಿವಾಹವಿಚ್ಛೇದವಾಗಿದೆ) ಪ್ರಸಿದ್ಧ ಕವಿ ಹರೀಂದ್ರನಾಥ ಚಟ್ಟೋಪಾಧ್ಯಾಯ; ಮತ್ತೊಬ್ಬರು ಸುಹಾಸಿನೀ ಚಟ್ಟೋಪಾಧ್ಯಾಯ.

ಈ ಮಗುವಿಗೆ ವಾತಾವರಣವೇ ಆಟದ ವಸ್ತುವಾಗಿ ದೊರೆತಿತ್ತು. ಅಘೋರನಾಥರಿಗಾದರೋ ತನ್ನಲ್ಲಿ ಹುಟ್ಟುವ ಸದ್ಭಾವನೆ ಮತ್ತು ಮಗು ಎರಡೂ ಒಂದೇ-ಸಾಧ್ಯವಿದ್ದಷ್ಟು ವಿಕಾಸಗೊಳಿಸಲು ಪ್ರಯತ್ನಿಸುವವರು ಹೊರತು ವಿರೋಧಿಸುವವರಲ್ಲ; ಮಮತೆ, ಆರೈಕೆಯ ನೀರೆರೆದೆರೆದು ತನ್ನ ಮೊಳಕೆಗಳನ್ನು ಫಲಬಿಡುವ ಮಹಾವೃಕ್ಷಗಳಾಗಿ ಬೆಳೆಸುವದನ್ನೇ ಜನ್ಮ ಧ್ಯೇಯವಾಗಿಟ್ಟುಕೊಂಡಿದ್ದ ವರದಾಸುಂದರಾದೇವಿಯಂತೂ ಕೂಸನ್ನು ತೊಟ್ಟಿಲಲ್ಲಿಡುವಾಗಲೂ ಜೀವನದ ಮುಂದಿನ ಮೆಟ್ಟಲನ್ನು ಸ್ಮರಿಸುತಿದ್ದ ತಾಯಿ. ಮಗು ಬೆಳೆಯಿತು; ಐದಾರು ವರುಷಗಳಾಗುವದರೊಳಗೆ ಅದನ್ನು ತಂತಮ್ಮದನ್ನಾಗಿ ಮಾಡಿಕೊಳ್ಳಲು ತಂದೆ ಮತ್ತು ತಾಯಿ ಸ್ಪರ್ಧಿಸಿಕೊಂಡರೆನ್ನಬಹುದು. ತಂದೆ ಹಿಂದೂ ಶಾಸ್ತ್ರ ಪಂಡಿತನಿದ್ದರೂ, ರಸಾಯನ ಸಂಶೋಧಕ; ಇಂಗ್ಲಿಷ್ ವಿದ್ಯಾ ಪ್ರೇಮಿ. ಸ್ವಾತಂತ್ರ್ಯ ಹೋರಾಟ ಯುಗದಲ್ಲೂ ದೇಶಭಕ್ತ ತಂದೆಯರಿಗೆ ಐ. ಸಿ. ಯಸ್. ಮಗಂದಿರಿದ್ದುದಿದೆ. ಇಲ್ಲಿ, ವಿಲಾಯತಿ ಪ್ರಯಾಣದಿಂದ ಜಾತಿ ಕೆಡುತ್ತದೆ ಎಂದು ಶಾಸ್ತ್ರ ಬಿಚ್ಚುತಿದ್ದವರ ಮಕ್ಕಳೇ ಅಲ್ಲಿ ಇಂಗ್ಲಾಂಡಿನಲ್ಲಿ ಬಾರ್-ಎಟ್-ಲಾ ಕಲಿಯುತ್ತಾ ಗಾಳ ಹಾಕುತಿದ್ದರು. ಪಂಡಿತ ಅಘೋರನಾಥರು ಎರಡೂ ಬೇಕೆನ್ನುವವರು; ಎರಡರಲ್ಲೂ ಆಸಕ್ತಿಯಿದ್ದವರು. ತನ್ನ ಮಗಳ ಮಟ್ಟಿಗೆ ಇಂಗ್ಲಿಷ್ ವಿದ್ಯೆಯೇ ಬೇಕು. ಅವಳನ್ನು ವಿಜ್ಞಾನ ಶಾಸ್ತ್ರ ಅಥವಾ ಗಣಿತ ಶಾಸ್ತ್ರಕ್ಕೆ ಹಾಕಬೇಕೆಂದು ಅವರ ಹಂಬಲ. ಅದಕ್ಕಾಗಿ ಸರೋಜಿನಿ ಇಂಗ್ಲಿಷಿನಲ್ಲಿಯೇ ತೊದಲಾಡುವಂತೆ ಕಲಿಸಹತ್ತಿದರು;

ತಾಯಿ, ಬಾಯಿ ಬರಿಸುತ್ತಿದ್ದುದು ಹಿಂದುಸ್ತಾನಿಯಲ್ಲಿ. ಹೀಗಾಗಿ ಈ ಬಂಗಾಳೀ ಕೂಸಿಗೆ ತಂದೆ ಮತ್ತು ತಾಯಿ ಇಂಗ್ಲಿಷ್ ಮತ್ತು ಹಿಂದುಸ್ಥಾನೀ ಶಿಕ್ಷಕರಾಗಿಯೂ ಬೆಳೆಯಿಸಿ ತಂದರು. ಭಾರತ ಶಿಕ್ಷಣರಂಗದ ಇಂಗ್ಲಿಷ್—ಹಿಂದೀ ಪೈಪೋಟಿ ಈ ಬಾಲೆಯ ಚಿತ್ತರಂಗದಲ್ಲಿ ಅಂದೇ ನಡೆದಿದ್ದಿತು. ಚುರುಕುಬುದ್ಧಿಯ ಹುಡುಗಿಗೆ ಇವೆರಡರಲ್ಲೂ ಹುಟ್ಟು ಆಸಕ್ತಿಯಿದ್ದಿತು. ಆದರೆ ಸರೋಜಿನಿಯ ಮನಸ್ಸು ದೈತನ ಕಣಜ—ಸ್ವತಃ ತನ್ನಲ್ಲಿ ಹುಟ್ಟಿದುದೇ ದಾಸ್ತಾನಿರಬೇಕು; ಬನಾರ್ ಅಕ್ಕೀ ಸಾಹುಕಾರನ ಭಂಡಸಾಲೆ ಅದಲ್ಲ--ಬೇರೆಡೆಯಿಂದ ಅವು ಬಂದುದನ್ನು ಸಂಗ್ರಹಿಸಿಟ್ಟುಕೊಳ್ಳುವವಳು, ಕಲಿಸಿಕೊಟ್ಟುದನ್ನೇ ಕಲಿತಿಟ್ಟುಕೊಳ್ಳುವವಳು ಅವಳಾಗಿರಲಿಲ್ಲ. ಇಲ್ಲಿ ಅವಳು ತಂದೆಯವಳಾಗಿರುವುದಕ್ಕಿಂತ ಹೆಚ್ಚಾಗಿ ತಾಯಿಯವಳಾಗಿದ್ದಳು. ಎಲ್ಲಾ ಮಕ್ಕಳೂ ಹೆಚ್ಚಾಗಿ ಹೀಗೆಯೇ ಏನೊ! ತಂದೆಯ ರಸಾಯನವಿದ್ಯೆ, ಗಣಿತಾಭಿರುಚಿಯಾವುದೂ ಅವಳಲ್ಲಿರಲಿಲ್ಲ; ಅವಳಲ್ಲಿದ್ದುದು ತಾಯಿಯ ಕವನಶಕ್ತಿ. ಹೆಣ್ಣಿಗೆ ತಾಯಿಯ ಲಕ್ಷಣ, ಗಂಡುಮಗನಿಗೆ ತಂದೆಯ ಗುಣವೆನ್ನೋಣವೆ? ಸರೋಜಿನಿಯ ತಮ್ಮ ಹರೀಂದ್ರನಾಥ ಚಟ್ಟೋಪಾಧ್ಯಾಯರು ಕೂಡಾ ಲೋಕಪ್ರಸಿದ್ಧ ಕವಿಯೇ ಆದರು ಹೊರತು ವಿಜ್ಞಾನಿಯಾಗಲೂ ಇಲ್ಲ; ಗಣಿತಜ್ಞನಾಗಲೂ ಇಲ್ಲ. ಬಾಲ್ಯದಲ್ಲಿ ಇಂಗ್ಲಿಷ್ ಕಲಿಯುವ ತಂಟೆಯನ್ನು ಕೂಡಾ ಸರೋಜಿನಿ ತಪ್ಪಿಸಿಕೊಳ್ಳಲು ನೋಡುತ್ತಿದ್ದಳು. ಕೊನೆಗೊಂದು ಬಾರಿ ಇಂಗ್ಲಿಷ್ ಬರೆದುಕೊಟ್ಟು ಕೋಣೆಯೊಳಗೆ ದೂಡಿ, ಬೀಗಹಾಕಿ "ಹೊರಗೆ ಬಿಡಬೇಕಾದರೆ ಇದನ್ನು ಕಲಿತುಕೊಳ್ಳಬೇಕು" ಎಂದು ತಂದೆ ಭವಿಷ್ಯ ರಕ್ಷಣಾ ಶಾಸನದನ್ವಯ ಮಗಳನ್ನು ದಿಗ್ಬಂಧನದಲ್ಲಿಡಬೇಕಾಯಿತು; ಆದರ ಪರಿಣಾಮ ಮಾತ್ರ ನಮ್ಮ ಇಂದಿನ ಕಾನ್ವೇಡುಗಳ ಮನಸ್ಸಿನ ಮೇಲಾಗುವದಕ್ಕಿಂತ ಭಿನ್ನವಾಯಿತು. ಇಂಗ್ಲಿಷ್ ಭಾಷೆಯೊಂದಿಗೆ ಆ ಕೋಣೆಯಲ್ಲಿ ನಡೆಸಿದ ಏಕಾಂತ ಜೀವನದಿಂದ ಅದರ ಸೌಂದರ್ಯ, ಮಾಧುರ್ಯವು ಈ ಹುಡುಗಿಯ ಮನಸ್ಸಿಗೆ ಹಿಡಿದುಹೋಯಿತೆಂಬಂತೆ ಅಂದಿನಿಂದ ಅವಳು ಇಂಗ್ಲಿಷಿನಲ್ಲಿ ವಿಶೇಷಾಸಕ್ತಿ ತೋರಿಸಹತ್ತಿದಳು. ಆದರೆ ಅವಳು ಒಳ್ಳೆಯ ವಿದ್ಯಾರ್ಥಿನಿಯಾಗಿ

ರಲಿಲ್ಲ; ಈ ಶಾಲಾ ಹುಡುಗಿಯ ಮನಸ್ಸು ತನ್ನ ಅಂತರ್ವಾಣಿಯನ್ನು ಆಲಿಸುತ್ತಿದ್ದಷ್ಟು ಅಧ್ಯಾಪಕವಾಣಿಯನ್ನು ಕೇಳುತ್ತಿರಲಿಲ್ಲ. ಶಿಕ್ಷಕರು ಪಟ್ಟಿಯಲ್ಲಿದ್ದ ಪಾಠಗಳನ್ನು ಹಿಂಡಿ ರಸ ತೆಗೆದು ಸುರಿದರೆ, ಅದು ಒಣಹೃದಯಕ್ಕಾದೀತು; ರಸಬುಗ್ಗೆ ಚಿಮ್ಮುತ್ತಿರುವಲ್ಲಿಗೇಕೆ ಬೇಕು? ಸರೋಜಿನಿ ಹುಟ್ಟು ಕವಯಿತ್ರಿ; ಭಾವನಾ ತೆರೆಗಳನ್ನೆಬ್ಬಿಸುತ್ತಿರುವ ಸಮುದ್ರದ ಮೇಲೆ ಬೀಳುವ ಮಳೆಯಂತಾಗಿತ್ತು ಅವಳ ಮಟ್ಟಿಗೆ ಉಪಾಧ್ಯಾಯರ ಉಪದೇಶ ಧಾರೆ. ಆಕೆ 11ನೇ ವಯಸ್ಸಿನಲ್ಲಿ ತನ್ನ ಪ್ರಥಮ ಕವನ ಕಟ್ಟಿದ್ದಳು ; ಅದೂ ಅವಳು ಎಳೆದು ತಂದುದಲ್ಲ, ಅದಾಗಿ ಬಾಗಿಲು ದೂಡಿಕೊಂಡು ಬಂದಿತ್ತು. ಒಂದು ಲೆಕ್ಕ ಪಾಠವನ್ನಾಕೆ ಮಾಡಲು ಕುಳಿತಿದ್ದಳು. ಎಷ್ಟು ತಲೆಕೆರಡುಮಾಡಿಕೊಂಡರೂ ಲೆಖ್ಖವಾಗಲೊಲ್ಲದು. ಆ ಪಾಡು, ಹಾಡಾಗಿ ಅವಳ ಬಾಯಿಯಿಂದ ಹೊರಬಿತ್ತು; ಅಳು--ಗಾನವಾಯಿತು; ಫಜೀತಿ--ಪದ್ಯವಾಯಿತು. ಅದೇ ಅವಳ ಮೊದಲಕವಿತೆ. ತನ್ನ 13ನೇ ವಯಸ್ಸಿನಲ್ಲಿ 'ತಟಾಕದ ತರುಣಿ' (ಲೇಡಿ ಓಫ್ ದಿ ಲೇಕ್) ಎಂಬ ಸುದೀರ್ಘವಾದ ಮತ್ತೊಂದು ಕವಿತೆ ರಚಿಸಿ. ದಳು. ಆ ಮೇಲಿನದೇ ಎರಡು ಸಾವಿರ ಪಂಕ್ತಿಗಳ ಒಂದು ನಾಟಕ, ಇದನ್ನು ಬರೆಯುವಾಗ ಅವಳು ಬಹಳ ಹಠ ಹಿಡಿಯಬೇಕಾಯಿತು, ವಿಶೇಷ ಶ್ರಮ ಪಡಬೇಕಾಯಿತು-ತತ್ಪರಿಣಾಮವಾಗಿ ಕಾಹಿಲೆ ಬಿದ್ದಳು. ಶಾಲೆಗೆ ಹೋಗಲಾಗಲಿಲ್ಲ; ಡಾಕ್ಟರರ ಸಲಹೆಯನ್ನವಳು ಕೇಳಲಿಲ್ಲ. ಕಾಹಿಲೆಯಿದ್ದಲ್ಲಿಯೇ ಒಂದು ಕಾದಂಬರಿಯನ್ನು ಬರೆದುಬಿಟ್ಟಳು. ಬರೆವ ಹುಚ್ಚು ಹಿಡಿದವರು ತಾವೇ ಆ ಹುಚ್ಚನ್ನು ಹಿಡಿದು ಕೊಳ್ಳುತ್ತಾರೆ. ಅಂಥವರನ್ನು ಬೇರಾವುದಾದರೂ ಹಿಡಿದುಕೊಂಡರೆ, ಅದು ಮಾತ್ರ ಅವರನ್ನು ಹಿಡಿದುಕೊಳ್ಳಬೇಕು ಹೊರತು ಪ್ರತಿಯಾಗಿ ಅವರು ಅದನ್ನು ಗಣಿಸುವಂತಿಲ್ಲ. ತನ್ನ ನಿತ್ಯದ ಆಗುಹೋಗುಗಳನ್ನು ಬರೆದಿಟ್ಟುಕೊಳ್ಳುವ ಕ್ರಮ ಕೈಕೊಂಡರು-ಆ ದಿನಚರಿಯೊಂದು ಜೀವಂತ ಸಾಹಿತ್ಯ.

ಮದ್ರಾಸ್ ಯುನಿವರ್ಸಿಟಿಯ ಮೆಟ್ರಿಕ್ಯುಲೇಷನ್ ಪರೀಕ್ಷೆ ಸರೋಜಿನಿ ಪಾಸಾದುದು ತನ್ನ 12ನೇ ವಯಸ್ಸಿನಲ್ಲಿ. ಆ ಕಾಲದಲ್ಲಿ ಈ ಪ್ರಾಯ

ದಲ್ಲೊಂದು ಮಗುವಿನ ತಾಯಿಯಾಗುವದಕ್ಕಿಂತಲೂ ಇದು ಹೆಚ್ಚಿನ ಆಶ್ಚರ್ಯದ ಸಂಗತಿ. ಹೆಣ್ಣು ಮಗಳೊಬ್ಬಳು ಇಷ್ಟು ಚಿಕ್ಕ ವಯಸ್ಸಿನಲ್ಲಿ "ಮೆಟ್ರಿಕ್" ಆಗಿ ಹೋದಳೆಂದು ಎಲ್ಲರೂ ಕೊಂಡಾಡುವವರೇ; ಆ ಮೇಲೆ ಕಾಲೇಜು ಶಿಕ್ಷಣವಾಯಿತು.

ಈ ಅಸಾಮಾನ್ಯ ಹೆಣ್ಣಿನ ಜೀವನಗತಿಯಲ್ಲೂ ಅಸಾಧಾರಣ ಕ್ಷಿಪ್ರತೆಯಿದ್ದಿತು; ಮಹಾ ಮನುಷ್ಯರೆಲ್ಲಾ ಹೀಗೆಯೇ—ಸಂಜೆ ಉತ್ಸವಕ್ಕೆ ಹೋಗಲಿರುವ ಹೆಣ್ಣು ಇಡೀ ದಿನದ ಮನೆಗೆಲಸವನ್ನು ಅವಸರವಾಗಿ ಮುಂಜಾನೆಯೇ ಮುಗಿಸಿಕೊಳ್ಳುವಂತೆ. ಗಾಂಧಿಜೀ ತನ್ನ 17ನೇ ವಯಸ್ಸಿನಲ್ಲೇ ಮಗುವಿನ ತಂದೆಯಾಗಿದ್ದರು-ಆ ಮೇಲೆ ಪ್ರಾಯ 40ರಿಂದ ಬ್ರಹ್ಮಚರ್ಯಪಾಲನೆ ಮಾಡಿಕೊಂಡು ತನ್ನ ಜೀವನವನ್ನು ಸಂಪೂರ್ಣವಾಗಿ ಜನತಾಸೇವೆಗೆ ಧಾರೆಯೆರೆಯಲು ಶಕ್ತರಾದರು. ಸರೋಜಿನಿಯು ತನ್ನ 16ನೇ ಪ್ರಾಯದಲ್ಲೇ ಪ್ರೇಮ ಸಂಬಂಧದಲ್ಲಿ ಸಿಕ್ಕಿಕೊಂಡಿದ್ದಳು; ಅದೂ ಈ ಉಚ್ಚ ವರ್ಗದ ಪಂಡಿತ ವಂಶೀಯ ಬ್ರಾಹ್ಮಣ ಕುವರಿ ಡಾ| ಎಮ್. ಗೋವಿಂದರಾಜುಲು ನಾಯಿಡು ಎಂಬ ಮದ್ರಾಸಿನ ಓರ್ವ ಅಬ್ರಾಹ್ಮಣ ಯುವಕನೊಡನೆ. ಈ ಹೊತ್ತಿನಲ್ಲಿ ಡಾ| ಅಘೋರನಾಥರು ಹೈದರಾಬಾದಿನ ನೈಜಾಮ್ ಕಾಲೇಜಿನ ಪ್ರಿನ್ಸಿಪಾಲರು; ಸರೋಜಿನಿಯ ಜನ್ಮ ಢಾಕ್ಕಾ ಹೈದರಾಬಾದಿನಲ್ಲಾದರೂ, ಅವಳ ಬಾಲ್ಯವೆಲ್ಲಾ ಕಳೆದುದು ನಿಜಾಮನ್ ಹೈದರಾಬಾದಿನಲ್ಲಿ. ಮಗಳ ವಾತಾವರಣವನ್ನು ಸ್ವತಂತ್ರಗೊಳಿಸಿಟ್ಟು, ಯಾವ ಕಪ್ಪು ಸೋಂಕದಷ್ಟು ಅದನ್ನು ಶುದ್ಧೀಕರಿಸಿಟ್ಟಮೇಲೆ, ಮತ್ತೆ ಮಗಳ ಸ್ವೇಚ್ಛಾವಿಹಾರಕ್ಕೆ ತಡೆಯೊಡ್ಡುವವರು ಆ ತಂದೆತಾಯಿಗಳಾಗಿರಲಿಲ್ಲ. ಆದರೆ ಎಲ್ಲರೂ ತಮ್ಮಿಂದ ಉಪದೇಶಕೇಳುವಷ್ಟು ಮೇಲ್ಮಟ್ಟದ ಬ್ರಾಹ್ಮಣ ಪಂಡಿತರಾದ ತಮ್ಮ ಮಗಳು--ಅದೂ ಬುದ್ಧಿಪಕ್ವಗೊಳ್ಳದ ಎಳೇಹುಡುಗಿ-ಓರ್ವ ಶೂದ್ರನನ್ನು ಪ್ರೀತಿಸುತ್ತಾಳೆ, ಆತನೊಡನೆ ಸಂಸಾರಹೂಡಲು ತಯಾರಾಗಿದ್ದಾಳೆ, ಎಂಬುದನ್ನು ಕಂಡೊಡನೆ ಚಟ್ಟೋಪಾಧ್ಯಾಯರ ಎದೆಯೊಡೆಯಿತು. ಮಗಳಿಗಂತಹ ಪ್ರೇರಣೆಕೊಟ್ಟ ವಾತಾವರಣವನ್ನು ಬದಲಾಯಿಸಬೇಕೆಂದು ತೋರಿತು. ಇದಕ್ಕೂ ಆಯಿತು-ಇಂಗ್ಲಿಷ್ ಕಲಿಯಲಿಕ್ಕೂ ಆಯಿತು,

ಎಂದು ಉಚ್ಚ ಶಿಕ್ಷಣಕ್ಕಾಗಿ ಅಘೋರನಾಥರು ಸರೋಜಿನಿಯನ್ನು ಇಂಗ್ಲಾಂಡಿಗೆ ಕಳುಹಿಕೊಟ್ಟರು. ಲಂಡನಿನ "ಕಿಂಗ್ಸ್ ಕಾಲೇಜ್" ಮತ್ತು ಕೇಂಬ್ರಿಜಿನ 'ಗಿರ್ಟನ್ ಕಾಲೇಜ'ನಲ್ಲಿಕಲಿತು ಈಕೆ ಪಾಸಾದಳು. ಇಂಗ್ಲಾಂಡಿನಲ್ಲಿರುವಾಗ ಈ ಇಂಗ್ಲಿಷ್ ಕವಯಿತ್ರಿಯು ಪ್ರತಿಭೆಗೆ ಮೆಚ್ಚಿ ಇವಳಿಗೆ ನೆರವು ಮತ್ತು ಪ್ರೋತ್ಸಾಹಗಳನ್ನಷ್ಟೇ ಅಲ್ಲ–ಆತ್ಮೀಯತೆಯ ಸಹಕಾರ ಕೊಟ್ಟವರೆಂದರೆ ಪ್ರಸಿದ್ಧ ಇಂಗ್ಲಿಷ್ ಕವಿ, ವಿಮರ್ಶಕರ ಪಂಗ್ತಿಗೆ ಸೇರಿದ್ದ ಸರ್ ಎಡ್ಮಂಡ್‌ಗೋಸೆ ಮತ್ತು ಆರ್ಥರ್ ಸ್ಯಮನ್ಸರು. ಲಂಡನಿನಲ್ಲಿ ಇಂಗ್ಲಿಷ್ ನಾಗರಿಕತೆ ಈ ಯುವತಿಯ ಕಾವ್ಯಮಯಹೃದಯಕ್ಕೆ ಸುಲಭದಲ್ಲಿ ಮೆತ್ತಿಕೊಂಡಿತು; ಆಕೆ ಇಂಗ್ಲಿಷ್ ಮಾದರಿಯ ಕವನಗಳನ್ನೇ ಆಗ ಕಟ್ಟುತ್ತಿದ್ದಳು. ಭಾರತೀಯ ನವಯುವತಿಯೀಕೆ ಇಂತಹ ಇಂಗ್ಲಿಷ್‌ಪಂಡಿತೆಯಿರುವುದು ವಿಶೇಷ; ಆದರೆ ಆಕೆಯ ಕವನ ವಸ್ತುವೂ ಇಂಗ್ಲಿಷ್ ಆಗಿರುವುದು ಕೃತಕವೆಂದು ತನ್ನ ವಿಮರ್ಶಾತ್ಮಕ ದೃಷ್ಟಿಗೆ ತೋರಿ "ಓ ಭಾರತೀಯಳೇ, ನಿನ್ನ ದೇಶ, ಜನ, ಸಂಸ್ಕೃತಿ, ಗುಣ ನಡತೆಗಳ ಕುರಿತೇ ಹಾಡು" ಎಂದು ಈ ಕೋಗಿಲೆಗೆ ಹೇಳಿಕೊಟ್ಟವನು ಗೋಸೆ. ಗೋಸೆ ಮತ್ತು ಸ್ಯಮನ್ಸರ ಸಖ್ಯದಲ್ಲಿದ್ದ ಅವಧಿಯಲ್ಲಿಯೇ 'ಸುವರ್ಣ ಹೊಸ್ತಿಲು' (ದಿ ಗೋಲ್ಡನ್ ಥ್ರೆಶ್‌ಹೋಲ್ಡ್) 'ಕಾಲ ಪಕ್ಷಿ' (ದಿ ಬರ್ಡ್ ಓಫ್ ಟೈಮ್) 'ಮುರಿದ ರೆಕ್ಕೆ'(ದಿ ಬ್ರೋಕನ್ ವಿಂಗ್)ಎಂಬ ಮೂರು ಕವನ ಸಂಗ್ರಹಗಳನ್ನವಳು ಬರೆದುದು. ಈ ಗುಚ್ಛತ್ರಯಗಳು ಈಗಲೂ ಪ್ರಸಿದ್ಧವಿವೆ. ಇಂಗ್ಲಾಂಡಿನಿಂದ ಈಕೆ ಇಟಲಿಗೆ ಹೋದಳು. ಕವಿಸಹಜವಾದ ಸಂಚಾರಾಭಿಲಾಷೆ, ಸೌಂದರ್ಯ ದರ್ಶನಾತುರವು ಸರೋಜಿನಿಯಲ್ಲಿದ್ದದ್ದೇ.

ಯುರೋಪಿನಿಂದ ಮರಳಿದ ಪ್ರಾಯ 19ರ ಯುವತಿ ಸರೋಜಿನಿ ತನ್ನ ಪ್ರಿಯತಮ ಡಾ| ಎಮ್. ಜಿ. ನಾಯುಡುಗಳನ್ನು 1898ರಲ್ಲಿ ಮದುವೆಯಾದಳು. ಆಗ ಅವಳನ್ನು ಆತಂಕಿಸುವ ಶಕ್ತಿಯಾವುದಕ್ಕೂ ಇರಲಿಲ್ಲ. ಗಂಡನೊಂದಿಗೆ ಸಂಸಾರ ನಡೆಸುತ್ತಾ ಈ ಯುವತಿ ಹೈದರಾಬಾದ್ ಸಂಸ್ಥಾನದ ಸಮಾಜ ಸಾಧಾರಣಾಕಾಶದಲ್ಲಿ ನವತಾರೆಯಾಗಿ ರಾಜಿಸಿದಳು. ಆಗಿನ ನೆರೆಹಾವಳಿ ನಿವಾರಣೆಗಾಗಿ

ಇವಳು ಮಾಡಿದ ಅಮೋಘ ಕಾರ್ಯಗಳಿಗೆ ಕೈಸರೀ ಹಿಂದ್ ಸುವರ್ಣ ಪದಕ ದೊರೆಯಿತು. ಆಕೆ ಸಮಾಜ ಸುಧಾರಣೆ ಕೈಕೊಂಡುದು ಬಯಲಿಗೆಬಿದ್ದಲ್ಲಿ, ಭಾಷಣಕ್ಕೆದ್ದಲ್ಲಿ ಹಾಕಿಕೊಳ್ಳುವ ಮುಸುಕಾಗಿ ಅಲ್ಲ; ಅದು ಅವಳ ಖಾಸಗೀ ಅಭಿಲಾಷೆಯಾಗಿ ಹುಟ್ಟಿಬಂದಿದೆ. ಧನಿಕ--ದರಿದ್ರ ಭೇದವು ಪ್ರಪಂಚದಲ್ಲಿದೆ ಎಂಬ ಪರಿಚಯವು ಅವಳಿಗೆ ಹುಟ್ಟಿ ಬೆಳೆವ ವರೆಗೂ ಆದುದಿಲ್ಲ. ಮಹಾಪಂಡಿತ ಅಘೋರನಾಥರು ಈ ಮಗಳನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ತನ್ನಲ್ಲಿಗೆ ಸಮಸ್ಯೆಬಿಡಿಸಿಕೊಳ್ಳಲು ಬರುವ ಜರಿಮುಂಡಾಸುವಾಲನನ್ನೂ, ಕರಟಿದ ಕೂದಲ ಬಡವನನ್ನೂ ಸಮಾನವಾಗಿ ಕಾಣುತಿದ್ದವರು. ಹಿಂದೂ ಮುಸ್ಲಿಂ ಭೇದವನ್ನೂ ಅವಳಿಂದ ಕಲಿತುಕೊಳ್ಳಲಾಗಿರಲಿಲ್ಲ. ಸರೋಜಿನಿಯ ಬಾಲ್ಯ ಮತ್ತು ತಾರುಣ್ಯವು ಮುಸ್ಲಿಂ ಆಡಳಿತೆಯಿದ್ದ ಹೈದರಾಬಾದಿನಲ್ಲಿಯೇ ನಡೆದಿತ್ತು; ಇವೆರಡು ಮತಗಳವರು ಪರಸ್ಪರ ವೈರಿಗಳೆಂಬ ಮಾತು ಹಾಗಿರಲಿ, ಅವರೊಳಗೆ ಭಿನ್ನಭೇದಗಳಿವೆ ಎಂಬುದು ಕೂಡಾ ಸರೋಜಿನಿಗೆ ತನ್ನ ನಿತ್ಯಜೀವನದಲ್ಲಿ ಅನುಭವವಾದುದಿಲ್ಲ. ತಂದೆಯನ್ನೂ ತನ್ನನ್ನೂ ಅಲ್ಲಿಯವರು ಗೌರವಿಸುತ್ತಿದ್ದ ರೀತಿನೀತಿಗಳಲ್ಲಿ ಮುಸ್ಲಿಂರೀತಿ ಮತ್ತು ಹಿಂದೂರೀತಿಯೆಂಬ ವ್ಯತ್ಯಾಸವಿರಲಿಲ್ಲ. ಇನ್ನು ಸಾಮಾಜಿಕ ಸಂಪ್ರದಾಯಗಳನ್ನು ಮುರಿದು ಸುಧಾರಣೆ ತರುವ ಹುರುಪು, ಅದವಳ ಮಟ್ಟಿಗೆ ಹುರುಪಲ್ಲ, ಹುಟ್ಟುಗುಣ; ಆಕೆ ಅದನ್ನು ಆಚರಿಸಿ, ಆಮೇಲೆಯೇ ಆಡುತ್ತಾ ಹೋದುದು. ಆ ಕಾಲದಲ್ಲಿ ಬೇರೊಬ್ಬರಾದರೆ ಮುಖವೆತ್ತಿ ಬೆಳಕು ನೋಡಲಾಗದ ಮಹಾಪರಾಧ ಮಾಡಿದವಳು ಆಕೆ- ಉಚ್ಚ ಬ್ರಾಹ್ಮಣ ಕುವರಿಯಾಗಿದ್ದು ಅಬ್ರಾಹ್ಮಣನ ಕೈಹಿಡಿದವಳು. ಮನಸ್ಸಾಕ್ಷಿಯೇ ಹೇಳುತ್ತಿದೆ—ನರನಾಡಿಗಳಲ್ಲಿ ಪಂಡಿತ ರಕ್ತ ಹರಿದಾಡುತ್ತಿರುವ ತನ್ನ ಮಟ್ಟಿಗೂ ಇದು ಅನ್ಯಾಯವಲ್ಲ ಎಂದು. ಅಂದಮೇಲೆ ಇಡಿಯ ಸಮಾಜಕ್ಕಿದು ಅನ್ಯಾಯವಾಗುವದು ಹೇಗೆ? ಎಂದು ಅವಳು ಏಕಾಕಿಯಾಗಿ ಸಮಾಜಕ್ಕೆ ಸಡ್ಡು ಹೊಡೆದು ಕೇಳಲು ಎದೆಗೊಂಡಿದ್ದಳು. ಹೀಗೆ ಸ್ವತಂತ್ರಳಾಗಿ ಬೆಳೆದು ಬಂದವಳಿಗೆ ತನ್ನ ಮಾತೃಭಾರತಿಯು ಪಾರತಂತ್ರ್ಯವು ಸಹನೆಯಾಗದೆ ಹೋದುದೂ ಸ್ವಾಭಾ

ವಿಕ. ಶ್ರೀಮತಿ ಸರೋಜಿನಿ ನಾಯಿಡು, ಹೈದರಾಬಾದಿನಲ್ಲೇ ಹಲವು ವರುಷ ಸಂಸಾರಜೀವನ ನಡೆಸಿಕೊಂಡಿದ್ದರು. ಆಕೆ ಎರಡು ಗಂಡು, ಎರಡು ಹೆಣ್ಣು ಮಕ್ಕಳನ್ನು ಹೆತ್ತ ನಾಲ್ಕು ಮಕ್ಕಳ ತಾಯಿ. ಮೊದಲನೆಯ ಮಗ- ಜಯಸೂರ್ಯ; ಎರಡನೆಯವಳೇ ಮಗಳು— ಪದ್ಮಜ ನಾಯಿಡು. ಮೂರನೆಯದು ಪುನಃ ಗಂಡು- ರಣಧೀರನೆಂದು ಹೆಸರು. ಈತ 1946ರಲ್ಲಿ ಬೆಂಗಳೂರಿನಲ್ಲಿ ತೀರಿಕೊಂಡ. ನಾಲ್ಕನೆಯದು ಪುನಃ ಹೆಣ್ಣು- ಹೆಸರು ಲೀಲಾಮಣಿ.

ದೇಶಭಕ್ತಿ

ಸಂಸಾರ ಜೀವನ ಮತ್ತು ಸಾಮಾಜಿಕ ಸುಧಾರಣೆಯಲ್ಲೇ ಸರೋಜಿನಿಯ ಯವ್ವನದ ಹಲವು ವರುಷಗಳು ಹೈದರಾಬಾದಿನಲ್ಲಿ ಕಳೆದುವು; ಆದರಿದು ಅಷ್ಟಕ್ಕಾಗಿಯೇ ಅವತರಿಸಿದ್ದ ಹೆಣ್ಣಾಗಿರಲಿಲ್ಲ. ಅವರಲ್ಲಿದ್ದ ಸಾಹಿತ್ಯ ಮತ್ತು ವಾಗ್ಪ್ರತಿಭೆ, ಹುರುಪು, ಸಾರ್ವಜನಿಕ ಸೇವಾಕಾಂಕ್ಷೆ ಮತ್ತು ಯೋಗ್ಯತೆಗೆ ಹೈದರಾಬಾದು ಕ್ಷೇತ್ರ ಕಿರಿದೆನಿಸಿತು; ಭಾರತವು ಅವರನ್ನು ಆಕರ್ಷಿಸಿತು. ಊರಸೇವಕಿ ಮನೆ ಬಿಟ್ಟಳು; ದೇಶಸೇವಕಿ ಸಂಸ್ಥಾನ ತೊರೆದಳು. 1914-15ರ ಸುಮಾರಿಗೆ ಸರೋಜಿನಿನಾಯಿಡು ಹೈದರಾಬಾದಿನಿಂದ ಬೊಂಬಾಯಿಗೆ ಬಂದರು; ಅಂದಿನಿಂದ ಕೊನೆಯವರೆಗೂ ಅವರು ಬೊಂಬಾಯಿಯನ್ನೇ ತನ್ನ ಊರಾಗಿ ಮಾಡಿಕೊಂಡಿದ್ದರು; ಗಂಡ ಎಮ್. ಜಿ. ನಾಯಿಡು ಗೂಟದಂತೆ ಹೈದರಾಬಾದಿನಲ್ಲೇ ಉಳಿದುಕೊಂಡುದರಿಂದ ಅವರ ಸಂಬಂಧ ಹಗ್ಗ ಉದ್ದವಾಯಿತು—ಪತ್ನಿ ಸರೋಜಿನೀನಾಯಿಡು ಕಾಮಧೇನುವಾಗಿ ದೇಶದಲ್ಲೆಲ್ಲಾ ಸುತ್ತಾಡಿದರು; ದೀರ್ಘಕಾಲದ ಗುಲಾಮಬೇಗೆಯಿಂದ ಗಂಟಲಾರಿದ್ದ ಭಾರತಾಂಬೆಗೆ ಇಂತಹ ಗೋಸಂಪತ್ತಿನ ಆವಶ್ಯಕತೆ ಬಹಳವಿತ್ತು. ಡಾ. ಎಮ್. ಜಿ. ನಾಯಿಡುಗಳು ಹೈದರಾಬಾದಿನ ಮೇಜರ್ ಆಗಿ ಈಗಲೂ ಅಲ್ಲಿಯೇ ಇದ್ದಾರೆ; ಸರೋಜಿನಿ ಬೊಂಬಾಯಿಗೆ ಬಂದು ಭಾರತ ರಾಜಕೀಯವನ್ನು ತನ್ನ ಕಾರ್ಯಕ್ಷೇತ್ರವಾಗಿ ಮಾಡಿಕೊಂಡ ಮೇಲೆ ಅವರ ಜತೆಗಾರನಾಗಿ ನಾಯಿಡುಗಳು ತೋರಿಬಂದುದು

ಕಡಿಮೆ. ಸರೋಜಿನಿಯ ಕೀರ್ತಿ ಬೆಳೆಯುತ್ತಾ ಹೋದಂತೆ, ಅವರ ಹೆಸರಿನ ಬಾಲವಾಗಿದ್ದ 'ನಾಯಿಡು' ಪದವೂ ಸವೆಯುತ್ತಾ ಹೋಗಿ ಕೊನೆಗೆ ಸರೋಜಿನಿ ನಾಯಿಡುಗಳು ಸರೋಜಿನಿ 'ದೇವಿ'ಯಾಗಿ ಹೋದರು. ಗಂಡ ಪತ್ನಿಯ ಬೆನ್ನು ಹಿಡಿಯಲಾರದವ; ತನ್ನ ಪಕ್ಕದಲ್ಲೇ ಹಲವು ವರುಷ ಸವೆದಿದ್ದ ಪತ್ನಿಯ ಕಾಯವು ದಹನವಾಗುವ ಮೊದಲೊಮ್ಮೆ ಅಂತ್ಯದ ಹಾಗೂ ಅಪರೂಪದ ದರ್ಶನ ಪಡೆಯಬೇಕೆಂಬಾತುರದಿಂದ ಇದೇ ಮಾರ್ಚಿ ತಾ. 2ಕ್ಕೆ ಲಕ್ನೋವಿಗೆ ಹೋಗಬೇಕೆಂದು ಈ ಹತಭಾಗಿ ಗಂಡ ನಿರ್ಧರಿಸಿದ್ದ; ಆದರೆ ಬೆನ್ನಲ್ಲೇ ಹೈದರಾಬಾದ್ ಬಿಡಲಾಗುವದಿಲ್ಲವೆಂದು ಗದ್ಗದಕಂಠದಿಂದ ಮಗಳು ಪದ್ಮಜನಾಯಿಡುವಿಗೆ 'ಫೋನ್' ಮಾಡಬೇಕಾಗಿ ಬಂತು. ದುಃಖರಸದಿಂದ ತೊಯ್ದಿದ್ದ ತಂದೆಯ ಧ್ವನಿಯಿಂದಲೇ ಅವನ ಹೃದಯದ ಪರಿಚಯಮಾಡಿಕೊಂಡ ಮಿಸ್. ಪದ್ಮಜನಾಯಿಡು "ತಂದೆಯವರೇ; ನೀವು ನಿಮ್ಮನ್ನು ಶಮನಿಸಿಕೊಳ್ಳಲು ನೋಡಿ" ಎಂದು ಕೇಳಿಕೊಳ್ಳಬೇಕಾಯಿತು. ತಾಯಿಯ ಎದೆಗಾರಿಕೆ ಮಗಳಲ್ಲಿದ್ದೀತು; ಪತ್ನಿಯ ಧೈರ್ಯ ಪತಿಗೆ ಬಂದೀತೆ?

oo oo

ಭಾರತಾಂಬೆಯ ಸೇವಾದೀಕ್ಷೆತಳೆದ ಸರೋಜಿನಿಯ ಮತ್ತು ಈ ಧೀರಪುತ್ರಿಯ ಸೇವೆ ಪಡೆಯಹತ್ತಿದ ಭಾರತಮಾತೆಯ ಜೀವನ ರೀತಿಗಳೇ ಅಂದಿನಿಂದ ಬದಲಾಯಿಸಿದುವೆನ್ನಬಹುದು. ಸರೋಜಿನೀ ನಾಯಿಡುಗಳಿಗೆ ಕವಿತಾರಚನೆ ಮೆಚ್ಚಿದಷ್ಟು ಬೇರಾವುದರಲ್ಲೂ ಅಷ್ಟೊಂದು ಒಲವಿರವಿಲ್ಲ. ಕೊನೆಯವರೆಗೂ—ಅವರ ಮಾತುಗಳನ್ನು ಕೇಳಿದವರಿಗೆ, ಅವರ ಭಾವಮಾಧುರ್ಯ ವ್ಯಂಗ್ಯವಿನೋದಗಳನ್ನು ಕಂಡವರಿಗೆ, ಆಕೆಯೋರ್ವ ಕವಯಿತ್ರಿಯೆಂಬ ಭಾವನೆಯೇ ಎಲ್ಲಕ್ಕಿಂತ ಹೆಚ್ಚಾಗಿ ಮೊಳೆಯುತಿತ್ತು. ಗಾಂಧೀ ಬೋಧೆಯ ಶುದ್ಧೀಕರಣ ಶಕ್ತಿ, ಸರಳತೆಯಾಗಲೀ ವಲ್ಲಭಾಯಿ ಭಾಷಣದ ವ್ಯವಹಾರ್ಯತೆ, ಸ್ಪಷ್ಟತೆ, ಮೂದಲಿಕೆಗಳಾಗಲೀ ಸರೋಜಿನೀ ವಾಣಿಯಲ್ಲಿರುತ್ತಿರಲಿಲ್ಲ. ಅವರ ಭಾಷಣದ ಮುಖ್ಯಾಂಶವಾಗಿ

ಭಾವ ಸೌಂದರ್ಯ ಸೇರಿಕೊಳ್ಳುತ್ತಿತ್ತು; ನವಚೇತನ ನಿರ್ಮಾಣದ ಮಟ್ಟಿಗೆ ಅದು ಬಹು ಅಂಶ ಜವಾಹಿರಲಾಲರ ಭಾಷಣವನ್ನು ಹೋಲುತಿದ್ದರೂ, ಹೃದಯಕ್ಕೊಂದು ಮಾಧುರ್ಯ ತುಂಬಿಸುವಲ್ಲಿ ಈ ಮಹಿಳೆಯನ್ನು, ಕವಯಿತ್ರಿಯನ್ನು, ಸರಿಗಟ್ಟುವವರು ರಾಜಕೀಯದಲ್ಲಿ ಬೇರಿರ ಲಿಲ್ಲವೆನ್ನಬಹುದು. ಇಂತಹ ಕಾವ್ಯಜೀವಿ ಕೂಡಾ ದೇಶ ಸೇವೆಯೇ ತನ್ನ ಮೊದಲ ಕರ್ತವ್ಯ-ತನ್ನ ಪ್ರಾಣಾವಧಿ ಉದ್ಯೋಗ-ಎಂದು ಭಾವಿಸಿ ಕೊಂಡರು. ಆಗಿನ ಭಾರತದ ಸ್ಥಿತಿ ಹಾಗಿದ್ದಿತು.

ಮಹಿಳೆಯನ್ನು ಮರೆಯಲ್ಲಿಡುವ ಸಂಕೋಚ, ಶಂಕೆ, ಮುಖಹೇಡಿತನ, ಹೇಡಿತನವಾವುದೂ ಇಲ್ಲದಾಕೆ; ಮಹಿಳೆಯ ಮರ್ಯಾದೆಯಾಗಿರುವ ಮಮತೆ, ವಾತ್ಸಲ್ಯಗಳನ್ನು ದೇಶ ಬಂಧುಭಗಿನಿಯರೆಲ್ಲರ ಮೇಲೂ ಕಟ್ಟಿಕೊಂಡಾಕೆ; ಯಾವವಿಧದ ಮೇಲು ಕೀಳು ಭಾವನೆಯೂ ಇರದ ವಿಶಾಲಹೃದಯಿ, ಹುಟ್ಟು ಸುಧಾರಕಿ; ಅಸಾ ಧಾರಣ ಲೇಖಕಿ ಮತ್ತು ವಾಗ್ಮಿ--ಇಂತಹ ಸರೋಜಿನಿನಾಯಿಡು ರಾಜ ಕೀಯದಲ್ಲಿ ಕಾಲಿಟ್ಟಾಗಲೇ ಭಾರತದ ಮಹಿಳಾ ಮುಂದಾಳುವನ್ನಿಸಿ, ಆ ಮೇಲೆ ಸರ್ವ ಪ್ರಥಮ ಸ್ತ್ರೀನಾಯಕಿಯಾದುದೂಅಗ್ರಗಣ್ಯ ರಾಷ್ಟ್ರನಾಯ ಕರ ಪಂಗ್ತಿಯಲ್ಲಿ ಒಬ್ಬಳಾದುದೂ ಸಹಜವೇ. 1917ರಲ್ಲಿ ಕಂಜೀವರ ಮಿನಲ್ಲಿ ಸೇರಿದ ಮದ್ರಾಸ್ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾದರು. 1923ರಿಂದ 1929ರ ವರೆಗೆ ಬೊಂಬಾಯಿನಗರ ಸಭಾ ಸದಸ್ಯ ರಾಗಿದ್ದರು. ದಕ್ಷಿಣಾಫ್ರಿಕದ ಭಾರತೀಯರ ಸಂಕಷ್ಟನಿವಾರಣಾ ಕಾರ್ಯಗಳಿಗಾಗಿ 1923ರಲ್ಲೊಮ್ಮೆ 1924ರಲ್ಲೊಮ್ಮೆ ದಕ್ಷಿಣಾಫ್ರಿಕಕ್ಕೆ ಹೋಗಿ ದುಡಿದಿದ್ದರು. ಗಾಂಧಿಜೀ ಹೂಡಿದ್ದ ಅಸಹಕಾರ ಹೋರಾ ಟದ ಮುಖ್ಯ ಸೇನಾನಿಗಳಲ್ಲೊಬ್ಬರಾಗಿದ್ದರು. ಧುರೀಣ ಪದವಿ ಯೆಂದರೆ, ಅದು ಮೇಲಾಡಿ ಪಡೆಯುವಂತಹದಲ್ಲ- 'ಯಾಕಲ್ಲ ?' ಎನ್ನುವವರಿರಬಹುದು. ಆದರೆ ಅಂಥವರು ತಮ್ಮ ಪ್ರಶ್ನೆಯ ಪುಷ್ಟೀಕರಣಕ್ಕಾಗಿ ಮಂತ್ರಿಗಳಾದವರನ್ನೋ ಬೇರಾವುದೇ ಹುದ್ದೆವಾಲ ದನ್ನೋ ತೋರಿಸಬೇಕು ಹೊರತು ಜನನಾಯಕರನ್ನಲ್ಲ; ಜನತೆಯ ಪ್ರೀತಿ, ವಿಶ್ವಾಸಗಳಿಗೆ ಪಾತ್ರರಾದವರನ್ನಲ್ಲ. ಇಂತಹ ಧುರೀಣರಾಗ

ಬೇಕು ತ್ಯಾಗ ಮತ್ತು ಸೇವಾಬಲದಿಂದಲೇ. ಅಂತಹ ಗಂಡು ಪುಢಾರಿಗಳೇನೋ ಭಾರತದಲ್ಲಿ ಆಗುತ್ತಾ ಬಂದಿದ್ದರು. ಹಿಂದಿನ ಕಾಲಗಳಲ್ಲಿ ಒಂದೊಂದು ಅವಧಿಯಲ್ಲಿ ಒಬ್ಬರಿಬ್ಬರು ಮಾತ್ರ ತೋರಿ ಬರುತ್ತಿದ್ದರೆ ಗಾಂಧಿಜೀ ನಿರ್ಮಿತ ಸ್ವಾತಂತ್ರ್ಯ ಹೋರಾಟಯುಗದಲ್ಲಿ ಏಕಕಾಲದಲ್ಲಿ ಹಲವರು ಕಾಣಿಸಿಕೊಂಡಿದ್ದರು. ಆದರೆ ಆ ಪೈಕಿ ಅಗ್ರಗಣ್ಯರೆಲ್ಲರೂ ಗಂಡಸರೇ; ಸಾರ್ವಜನಿಕ ಪುಢಾರಿತ್ವದೆಡೆಗೆ ಅಪರೂಪದಲ್ಲಾದರೂ ಸಿಡಿಯುವಷ್ಟು ಹಿಂದೀ ಮಹಿಳಾವರ್ಗ ಆ ಕಾಲದಲ್ಲಿ ಮುಂದುವರಿದಿರಲಿಲ್ಲ; ಹಾಗೆ ಅಗ್ರಗಣ್ಯ ಪಂಗ್ತಿಯಲ್ಲಿ ರಾಜಿಸುತಿದ್ದ ಒಬ್ಬಾಕೆ ಅನ್ನಿಬಿಸೆಂಟರು ಐರಿಷ್ ಮಹಿಳೆ. ಈ ಅಭಾವವನ್ನು ನಿವಾರಿಸಿದವರು ನಿಜಕ್ಕೂ ಸರೋಜಿನಿದೇವಿ. ಒಳ್ಳೆಯದನ್ನಾಗಲೀ, ಕೆಟ್ಟುದನ್ನಾಗಲೀ, ನಮ್ಮ ಮಹಿಳೆಯರು ಕಲಿಯುವದು ಹೆಚ್ಚಾಗಿ ಅನುಕರಣಬಲದಿಂದಲೇ. ಪತಿವ್ರತಾಧರ್ಮವನ್ನು ಅರಿತಿರುವರಾದರೆ ಅಹಲ್ಯಾ, ದ್ರೌಪದಿ, ಸೀತೆ, ತಾರೆ, ಮಂಡೋದರಿಯರ ಕಥೆ ಕೇಳಿ; ಆಧುನಿಕ ನವನಾಗರಿಕತೆಗೆ ಬಲಿಬಿದ್ದಿರುವರಾದರೆ ಮಡ್ಡಮಗಳನ್ನು ಕಂಡೇ; ದೇಶಭಕ್ತೆಯರು, ದೇಶಸೇವಿಕೆಯರು ಇಂದು ಕಂಡು ಬರುತ್ತಿರುವರಾದರೆ ಸರೋಜಿನೀ ದೇವಿಯಂಥವರನ್ನು ನೋಡಿಯೇ. ಈ ದೃಷ್ಟಿಯಿಂದ ನೋಡಬೇಕು- ಸರೋಜಿನಿಯಿಂದಾಗಿರುವ ಕೆಲಸವೆಷ್ಟು ದೊಡ್ಡದೆಂಬುದು ಆಗ ತಿಳಿದುಬರುವುದು. ರಾಷ್ಟ್ರದ ಜೀವನ ಮರಣದ ಮಹಾಯುದ್ಧವೊಂದರಲ್ಲಿ ಸ್ತ್ರೀವರ್ಗಕ್ಕೆ- ಸಮಭಾಗ, ಜನತೆಗೆ- ಯೋಧಸ್ಫೂರ್ತಿ ಕೊಟ್ಟವರು, ಮಾದರಿಯಾಗಿ ಮುಂದೆ ಬಂದವರು, ಸರೋಜಿನಿ ದೇವಿ. ಸ್ವಾತಂತ್ರ್ಯಸಮರಕ್ಕೆ ಸೇನೆಯ ಅರೆವಾಸಿಯಷ್ಟನ್ನು ಸಂಗ್ರಹಿಸಿ ಕೊಟ್ಟ ಕೀರ್ತಿಯ ಹೆಚ್ಚಿನಂಶ—ಪ್ರಥಮ ಬಹುಮಾನ—ಸರೋಜಿನೀ ದೇವಿಗೆ ಸಲ್ಲಬೇಕು.

ಸುಮಾರು 1915ರಿಂದ ಮೊನ್ನೆ ಸಾಯುವ ವರೆಗಿನ ಸರೋಜಿನೀ ದೇವಿಯ ಜೀವಮಾನವೆಂಬುದು ರಾಷ್ಟ್ರ ಪುರುಷನ ಕೈಯಲ್ಲಿ ರಾಜಿಸಿದ-ಹರಿತ ಈಟಿಯೂ ತುಂಬಿದ್ದ ನಾಜೂಕಿನ ಚಿತ್ರದಂತಿದೆ. ಆದಿ ಭಾಗದಲ್ಲಿ ಭಾರತದ ಕಾಡುಹಾದಿಯ ಸುತ್ತಮುತ್ತ ಹರಡಿದ್ದ ಬಳ್ಳಿ ಪೊದರುಗಳನ್ನು

ತೆರೆದು ಹಾಕಲು ಆ ಈಟ ಹೊರಗೆ ಬಂದಿತ್ತು; ಆ ಮೇಲೆ ಇಡೀ ಕಾಡನ್ನೇ ನೆಲಸಮ ಮಾಡಿ ಅದನ್ನಾಶ್ರಯಿಸಿದ್ದ ಕಳ್ಳ ಕಾಕರು, ಕಾಡು ಮೃಗಗಳನ್ನೆಲ್ಲಾ ಇರಿದೋಡಿಸುವ ಹೋರಾಟಾಯುಧವಾಗಿ ಅದು ಪರಿಣಮಿಸಿತು; ಆ ಕೆಲಸ ಪೂರ್ಣವಾಗಿ ಕಾಡು ನಾಡಾದ ಮೇಲಿನ ಅಲ್ಪಾವಧಿಯಲ್ಲಿ ಈಟ ಪುನಃ ಒಳಗಡೆ ಸೇರಿ ಅದೊಂದು ನಾಜೂಕಿನ ಬೆತ್ತ–ರಾಜದಂಡ–ಆಗಿ ರಾಜಿಸಿತು. ಮುಖ್ಯ ಕೆಲಸ ಮುಗಿದ ಮೇಲೆ, ಇನ್ನು ಇದೇಕೆ ಎಂಬಂತೆ ಮೊನ್ನೆ ಆ ಅಪೂರ್ವದಂಡವೇ ಜಾರಿಹೋಗಿದೆ!

ಅಖಿಲಭಾರತೀಯರ ಹೃದಯದಲ್ಲಿ ಸರೋಜಿನಿದೇವಿ ಪ್ರಥಮ ಬಾರಿ ಪ್ರವೇಶಿಸಿದ್ದುದು 1915ರಲ್ಲಿ ಒಂದು ಭಾಷಣದ ಮೂಲಕ. 'ಇಂತಹ ಭಾವನೆಯನ್ನು ಈ ರೀತಿ ಸೂಸಬಲ್ಲಜೀವ, ಅದು ರಾಷ್ಟ್ರದ ಅಮೂಲ್ಯ ಸೊತ್ತು' ಎಂದು ಎಲ್ಲರೂ ಹರ್ಷ್ಯಕೇಳಿದರು. 'ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು' ಎಂಬ ಮೂಲಮಂತ್ರವನ್ನು ಲೋಕಮಾನ್ಯತಿಲಕರು ಉಚ್ಚರಿಸಿದುದು—ಅಲ್ಲ, ಗುಡುಗಿದುದು--1916ರಲ್ಲಿ ಶ್ರೀ ಅಂಬಿಕಾಚರಣ ಮಜುಮ್‌ದಾರರ ಅಧ್ಯಕ್ಷತೆಯಲ್ಲಿ ಸೇರಿದ್ದ ಕಾಂಗ್ರೆಸ್ ಮಹಾಧಿವೇಶನದಲ್ಲಿ. ಅಲ್ಲಿ ಸರೋಜಿನೀದೇವಿಯಿತ್ತ ಭಾಷಣವು ಎರಡನೇ ಬಾರಿ ಅಖಿಲಭಾರತೀಯ ಹೃದಯಗಳಲ್ಲಿ ಮಾರ್ದನಿಗೊಟ್ಟಿತು. ಹೀಗೆ ಎರಡು ಬಾರಿ ನಿಂತಲ್ಲಿಂದಲೇ ರಾಷ್ಟ್ರದ ಬಂಧುಭಗಿನಿಯರ ಹೃದಯ ಸೂರೆಗೊಂಡವರು, 1917ರಲ್ಲಿ ಅಖಿಲಭಾರತದ ಪ್ರತಿಯೊಂದು ಕಡೆಗೆ ಪ್ರತ್ಯಕ್ಷ ಹೋಗಿ ಆ ಕೆಲಸ ಮಾಡಿ ಬಂದರು. ಆಗ ಸರೋಜಿನೀದೇವಿಯ ಪ್ರಾಯ 38; ಆದರೆ ಅವರ ಜನ್ಮದಿನದ ಆಧಾರವಿಲ್ಲದವರಾರೂ 20ಕ್ಕೆ ಮಿಕ್ಕಿದೆ ಎಂದು ಹೇಳಲು ಎದೆಗೊಳ್ಳುವಂತಿರಲಿಲ್ಲ ಆಕೆಯ ರೂಪ ಯೌವ್ವನದನೋಟ. ಇಂತಹ ಮಹಿಳೆ–ದೇಶ ಪ್ರೇಮಮತ್ತು ಸ್ವಾತಂತ್ರ್ಯಾಭಿಲಾಷೆಯನ್ನು ತುಂಬಿಕೊಂಡಂತೆಯೇ ಅನ್ಯರಲ್ಲೂ ತುಂಬಿಸಿಕೊಡುವ ಕಲೆಯನ್ನು ಮೈಗೂಡಿಸಿಕೊಂಡ ಭಾರತ ಸ್ತ್ರೀ ಶಿಖಾಮಣಿ– ರಾಷ್ಟ್ರದ ಆದ್ಯಂತವಾಗಿ ಸಂಚರಿಸಿದರು; ಆ ಮೂಲಕ ರಾಷ್ಟ್ರದಲ್ಲಿ ಒಂದು ನವಚೇತನವೇ ಸಂಚರಿಸಿತು. ತನ್ನ ಗಂಡನ ಪ್ರಾಂತ್ಯವಾದ ಮದ್ರಾಸಿನಲ್ಲಂತೂ 'ಪತಿಗೃಹ'ವೆಂಬ ಅಭಿಮಾನದಿಂದ ತಿರುಗಾಡಿ, ಇಲ್ಲಿಯ ಸೌಮ್ಯ ಜಾಣ ಮನೋ

ಗತಿಗೂ ತೀವ್ರವೇಗವನ್ನು ಉಂಟುಮಾಡಿದರು. ಕಾಂಜೀವರವಿನ ಸಮ್ಮೇಳನಾಧ್ಯಕ್ಷತೆ ವಹಿಸಿದುದು ಆ ಸಂದರ್ಭದಲ್ಲೇ- 1918ರಲ್ಲಿ ಕಾಂಗ್ರೆಸ್ ಅಧಿವೇಶನದೊಂದಿಗೆ ನಡೆದ ಅಖಿಲಭಾರತ ಸಮಾಜ ಸೇವಾಪರಿಷತ್ತಿನ ಅಧ್ಯಕ್ಷೆ ಶ್ರೀಮತಿ ಸರೋಜಿನಿ. 1919ರಲ್ಲಿ ಯುರೋಪು ಪ್ರವಾಸ ಕೈಗೊಂಡು ಜಿನೇವಾದಲ್ಲಿ ಸೇರಿದ್ದ ಮಹಿಳಾ ಮತಾಧಿಕಾರ ಸಮ್ಮೇಳನದಲ್ಲಿ ಭಾರತ ಮಹಿಳೆಯರ ಪ್ರತಿನಿಧಿಯಾಗಿ ಭಾಗವಹಿಸಿ, ಇಲ್ಲಿಯ ಸ್ತ್ರೀ ಸಮಾಜಕ್ಕೆ ಲೋಕಗೌರವ ದೊರಕಿಸಿಕೊಡುವ ಅಮೋಘ ಭಾಷಣವಿತ್ತರು. 1923ರಲ್ಲಿ ನಾಗಪುರದ ಸತ್ಯಾಗ್ರಹ ನಡೆದಾಗ ಇಡೀ ಮಧ್ಯಪ್ರಾಂತ್ಯದಲ್ಲಿ ತಿರುಗಾಡಿ, ಎಲ್ಲಾ ವಿಧದ ಭೀರುತನಗಳನ್ನೂ ಬಿರುಗಾಳಿಯಾಗಿ ಹಾರಿಸಿಬಿಟ್ಟರು.

ಕೈದಿ— ಗಾದಿ

1925ರಲ್ಲಿ ಕಾನ್ಪುರದಲ್ಲಿ ಸೇರಿದ ಕಾಂಗ್ರೆಸ್ ಅಧ್ಯಕ್ಷತೆ ಸರೋಜಿನಿಯ ಪಾಲಿಗೆ ಬಂತು. ದೇಶಸೇವಾರಂಗದಲ್ಲಿ ದುಡಿಯುತ್ತಾ ಕೊನೆಯ ಗೆರೆಯ ವರೆಗೆ ಹೋದವರಿಗೆ ಮಾತ್ರ ದೊರೆಯುವ ಅಗ್ರಪೂಜೆಯಿದು; ರಾಷ್ಟ್ರನಾಯಕರ ಪ್ರಥಮಪಂಕ್ತಿಯೊಂದು ಅಲ್ಲಿ ಎದ್ದಿರುವುದು ಆ ಪೀಠವೇರಿದ ಘನವಂತರಿಂದಲೇ. ಈವರೆಗೂ ಭಾರತದ ಮಹಿಳೆಯರ ಪೈಕಿ ಆ ಹುದ್ದೆಗೇರಿದವರು ಸರೋಜಿನಿಯೊಬ್ಬರೇ; ಹೆಣ್ಣು ಜಾತಿಯಲ್ಲೇ ಅದನ್ನೇರಿದ ಬೇರೊಬ್ಬರಿದ್ದಾರೆ—ಶ್ರೀಮತಿ ಅನ್ನಿಬೆಸೆಂಟ್. ತಾನು ಅಧ್ಯಕ್ಷೆಯಾದೊಡನೆ ಸರೋಜಿನಿದೇವಿ ಹೇಳಿದ ಮಾತುಗಳು ಈ ಹೆಣ್ಮಣಿಯ ಉಚ್ಚ ನೆಲೆಯನ್ನು ಪ್ರಕಾಶಿಸಿ ತೋರಿಸುವ ಹರಳುಗಳಾಗಿವೆ. ಆಗ ರಾಷ್ಟ್ರದಲ್ಲಿ ಹಿಂದು ಮುಸ್ಲಿಂ ಜಗಳ ನಡೆದಿತ್ತು. "ಓರ್ವ ಹೆಣ್ಣು ನಾನು. ಮನೆಯನ್ನು ವ್ಯವಸ್ಥೆಯಲ್ಲಿಟ್ಟು ಮನೆಯೊಡತಿ ಭಾರತಮಾತೆಗೆ ಅವಳ ಪಾಲಿನ ಘನಸ್ಥಾನ ದೊರಕಿಸಿಕೊಡುವ ಕರ್ತವ್ಯಭಾರ ನನ್ನದು—ಮನೆ ಸೇವಕಿಯಾಗಿ ನೇಮಕಗೊಂಡಿರುವ ಈ ಹೆಣ್ಣಾಳಿನದು. ಹೋ! ನನ್ನ ಪಾಲಿಗೆ ಬಂದಿರುವ ಕೆಲಸವೇ! ಇಲ್ಲಿಯ ಅವಿಭಕ್ತ ಕುಟುಂಬದ

ಕವರುಗಳೊಳಗೆ ದುಃಖದಾಯಿ ಜಗಳಗಳು ನಡೆದಿವೆ. ಅವುಗಳನ್ನು ನಿವಾರಿಸಬೇಕು; ಮಾತೆಯ ಮಕ್ಕಳು, ಸಾಕಣೇ ಮಕ್ಕಳು, ಅಥಿತಿಗಳು, ಬಾಗಿಲು ದೂಡುತ್ತಿರುವ ಹೊಸಬರು, ಇವರೆಲ್ಲರಿಗೂ ಅವರವರ ಸ್ಥಾನಮಾನ, ಉದ್ದೇಶ, ಬಯಕೆಗಳನ್ನರಿತು ಸತ್ಕಾರಮಾಡಬೇಕು.” ತನ್ನ ಅವಧಿಯಲ್ಲಿ ಈ ಸೇವಕಿ ಇಷ್ಟನ್ನೂ ಮಾಡಿದ್ದಳು.

ಅವರು ನಾಲ್ಕು ಬಾರಿ ಕಾರಾಗೃಹ ಸೇರಿದ್ದಾರೆ. ಒಂದೊಂದು ಹೆಜ್ಜೆಗೂ ಬ್ರಿಟಿಷ್ ಸಾಮ್ರಾಜ್ಯಾಸ್ತಿವಾರ ಒಂದೊಂದಿಂಚು ಕುಸಿದಂತಾಗಿದ್ದ. ಗಾಂಧಿಜೀಯ 1930ರ ದಂಡೀಯಾತ್ರೆಯಲ್ಲಿ ಮಹಾತ್ಮರ ಪಾದದೊಟ್ಟಿಗೇನೇ ಸರೋಜಿನಿಯ ಪಾದವೂ ಬೀಳುತ್ತಾ ಹೋಗಿತ್ತು- ತನ್ನಾಶ್ರಮ ಶಿಷ್ಯರ ದಳವನ್ನೇ ಕಟ್ಟಿಕೊಂಡು ಹೊರಟಿದ್ದ ಆ ಸ್ವಾತಂತ್ರ್ಯಸೇನಾನಿಯ ಆಗ್ರೈಕೆಗೊಬ್ಬಳು ತಂಗಿ ಬೇಕಲ್ಲಾ ಎಂದು. ದಂಡಿಯಲ್ಲಿ ಮಹಾತ್ಮಾಜೀ ಉಪ್ಪು ಹೆಕ್ಕಿದ ತಕ್ಷಣ ಅಲ್ಲಿ ಅವರಿಗೆ ದೊರೆತ ಜಯಕಾರಗಳೆಂದರೆ ಸಮುದ್ರದೇವಿಯದು ಮತ್ತು ಸರೋಜಿನೀದೇವಿಯದು. ಉಪ್ಪಿನ ಹರಳು ಗಾಂಧಿಜೀಯ ಕೈಗೆ ಬಂದೊಡನೆ “ಕಾನೂನುಭಂಜಕ” ಎಂಬ ಬಿರುದು ಈ ಕವಯಿತ್ರಿಯ ಬಾಯಿಯಿಂದ ಉದುರಿದ್ದಿತು. ಆ ಮೇಲೆ ಮಹಾತ್ಮರ ದಸ್ತಗಿರಿಯಾಯಿತು; ಅವರ ನಂತರದ ಸತ್ಯಾಗ್ರಹ ನಾಯಕನಾಗಿ ನೇಮಕಗೊಂಡ ಅಬ್ಬಾಸ್ ತಯಾಬ್ಜಿಯವರೂ ಬಂಧಿಗಳಾದರು; ಮೂರನೆಯ ನಾಯಕಿಯಾಗಿ ಸರೋಜಿನೀದೇವಿ ಧರ್ಸನಾ ಉಪ್ಪಿನ ಆಗರಕ್ಕೆ ಧಾಳಿಯಿಟ್ಟು ದಸ್ತಗಿರಿಯಾದರು. ಆ ಮೇಲೆ ಗಾಂಧೀ--ಇರ್ವಿನ್ ಒಪ್ಪಂದವಾಗಿ ಲಂಡನಿನಲ್ಲಿ ಸೇರಲಿದ್ದ ದ್ವಿತೀಯ ಚಕ್ರಬಂಧಗೋಷ್ಠಿಗೆ ತನ್ನ ಏಕಮಾತ್ರ ಪ್ರತಿನಿಧಿಯನ್ನಾಗಿ ಗಾಂಧಿಜೀಯನ್ನೂ ಅವರಿಗೆ ಸಹಾಯಕರಾಗಿ ಪಂಡಿತ ಮದನ ಮೋಹನಮಾಲವೀಯ ಮತ್ತು ಸರೋಜಿನೀದೇವಿಯನ್ನೂ ಕಾಂಗ್ರೆಸ್ ಕಳುಹಿಸಿತು. ಅಲ್ಲಿಯ ಮಾತುಕತೆ ಬಂಜೆಯಾಯಿತು. ಸ್ವಾತಂತ್ರ್ಯವು ಕೇಳಿ ಪಡೆಯುವ ವಸ್ತುವಲ್ಲ, ಹೋರಾಡಿ ಪಡೆಯುವ ಹಕ್ಕುಎಂದು ತಾನು ಕಲಿತಿದ್ದುದನ್ನೇ ಅಲ್ಲಿಯೂ ಮತ್ತೊಮ್ಮೆ ಕಲಿತುಕೊಂಡು ಭಾರತಕ್ಕೆ ಮರಳಿದ ಗಾಂಧಿಜೀ ಬಂದವರೇ ಪುನಃ

ಕಾಯದೇಭಂಗ ಚಳವಳ ಹೂಡಿದರು. ಪದ್ಧತಿಯಂತೆ ಮಹಾತ್ಮರ ಬಂಧನವಾಯಿತು. ಎಲ್ಲಾ ಪ್ರಮುಖರೂ ಕತ್ತಲೆ ಸೇರಿದರು; ಮಾತೆಯ ಆಪತ್ತಿಗಾಗುವ ಪುತ್ರಿ ಸರೋಜಿನೀದೇವಿಯೇ ನಾಯಕತ್ವ ವಹಿಸಿ ಬಂಧಿಸಲ್ಪಟ್ಟರು. ಆ ಮೇಲೆ ಎಲ್ಲರೊಂದಿಗೆ ಬಿಡುಗಡೆ —ಭಾರತ ಸರಕಾರ ಕಳುಹಿದ್ದ ಪ್ರತಿನಿಧಿ ಮಂಡಲಿಯ ಸದಸ್ಯೆಯಾಗಿ 1932ರಲ್ಲಿ ಪುನಃ ದಕ್ಷಿಣಾಫ್ರಿಕ ಪ್ರಯಾಣ—1940ರಲ್ಲಿ ಗಾಂಧಿಜೀ ವ್ಯಕ್ತಿ ಸತ್ಯಾಗ್ರಹ ಹೂಡಿದಾಗ ಮುಂದೆ ಹೋಗಿ ಮತ್ತೊಮ್ಮೆ ಸೆರೆಮನೆವಾಸ—1942ರ ಆ ಪ್ರಚಂಡ "ಕ್ವಿಟ್ ಇಂಡಿಯಾ" ಚಳವಳದ ಆರಂಭದೊಂದಿಗೇನೇ ಗಾಂಧಿಜೀಯೊಟ್ಟಿಗೆ ಕೊನೆಯ ಬಾರಿಯ ಜೈಲುವಾಸ ಆಗಾಖಾನ್ ಅರಮನೆಯಲ್ಲಿ! ಅಲ್ಲಿ ಪತ್ನೀವಿಯೋಗ ದುಃಖಕ್ಕೀಡಾದ ಗಾಂಧಿಜೀಯನ್ನು ಸಂತೈಸುತ್ತಿದ್ದುದು ಈ ಸಹೋದರಿ- 21 ದಿನಗಳ ಉಪವಾಸವನ್ನವರು ಕೈಕೊಂಡಾಗ ಅವರ ಆರೈಕೆ ಮಾಡಿದ್ದುದು ಈ ದಾದಿ-- ಅವರು ಉಪವಾಸ ವಿಜಯಿಯಾಗುವಂತೆ ಮಾಡಿ ಕಿತ್ತಳೇ ರಸದ ಮೊದಲ ಗ್ಲಾಸನ್ನು ಗಾಂಧಿಜೀಯ ಬಾಯಿಗಿಟ್ಟವಳು ಈ ತಾಯಿ. ಆದರೆ ಡಾಕ್ಟರ್ ರೋಗಿಗಳಿಲ್ಲವೆ? ಸರೋಜಿನಿಯೂ ಅಲ್ಲಿ ಕಾಹಿಲೆಗೀಡಾದರು. ಆ ವರೆಗೂ ಧನಿಕ-ದರಿದ್ರ, ಹಿಂದು-ಮುಸ್ಲಿಂ, ಸ್ತ್ರೀ-ಪುರುಷರನ್ನು ಕಾಣುತ್ತಿದ್ದಂತೆಯೇ ಅರಮನೆ-ಸೆರೆಮನೆಗಳನ್ನೂ ಸಮಾನವಾಗಿ ಕಂಡು ಅನುಭವಿಸಿದ್ದ ಸರೋಜಿನಿ ಪ್ರಾಯಾಧಿಕ್ಯದಿಂದಲೋ, ಅಥವಾ ನಿತ್ರಾಣಿ ಗಾಂಧಿಯ ಆರೈಕೆಗೆ ಹೊರಗೆ ತಂಗಿ, ದಾದಿ, ತಾಯಿ ಬೇರಾರಿದ್ದಾರೆಂದೇ ಹೀಗಾಯಿತೇನೋ; ಸರೋಜಿನಿ ದೇವಿಯೂ ಅಲ್ಲಿ ರೋಗಪೀಡಿತೆಯಾದರು. 1943ನೇ ಮಾರ್ಚಿಯಲ್ಲಿ ಜೈಲು ಆಸ್ಪತ್ರೆಯಲ್ಲವೆನ್ನುತ್ತಾ ಸರಕಾರವು ಈ ಕೋಗಿಲೆಯನ್ನು ಗೂಡಿನಿಂದ ಹೊರಬಿಟ್ಟಿತು. 1944ರಲ್ಲಿ ಅನಾರೋಗ್ಯದ ನಿಮಿತ್ತ ಗಾಂಧಿಜಿಯೂ ಆಗಾಖಾನ್ ಅರಮನೆಯಿಂದ ಬಿಡುಗಡೆಗೊಂಡರು; ಆರೈಕೆಗಾಗಿ ಬೊಂಬಾಯಿ ಬಳಿಯ ರಾಸ್ ಗ್ರಾಮದಲ್ಲಿ ನಿಂತರು. ಶುದ್ಧ ಹವೆ, ವಿಶ್ರಾಂತಿಸುಖ ಬೇಕೆಂದು ಮಹಾತ್ಮರು ಆ ಕಡಲತಡಿಯ ಪ್ರಶಾಂತಸ್ಥಳವನ್ನಾರಿಸಿಕೊಂಡಿದ್ದರೆ, ಆಗ್ರಗಣ್ಯ ನಾಯಕನಿಂದ ಹಿಡಿದು ದಾದಿ

ಹೋಕನ ವರೆಗಿನ ಎಲ್ಲರಹಿಂಡೂ ದಂಡಾಗಿ ಅಲ್ಲಿಗೆ ಮುತ್ತಿಗೆಯಿಡ
ಹತ್ತಿತು. ಜನತಾಸೇವೆಯೇ ತನ್ನ ಶ್ವಾಸವೆಂದು ಬಗೆದಿದ್ದ ಮಹಾತ್ಮಾಜೀ
ಜನರ ಈ ಆದರವೇ ತನ್ನ .ಆರೋಗ್ಯವೆಂಬಂತಿದ್ದಾರೆ; ರೋಗಿಗಾಂಧಿ
ಯನ್ನು ಜನ ನೊಣದಂತೆ ಮುತ್ತಿಕೊಂಡಿದೆ; ಗಾಂಧೀ ದರ್ಶನಾಕಾಂಕ್ಷೆ
ಗಾಗಿ ನಾಗಲೋಕದಿಂದೆಂಬಂತೆ ಓಡಿಬರುವವರಿಗೆ ಅಲ್ಲಿಯ ಸ್ವಯಂ
ಸೇವಕ ಬೇಲಿಯೂ ಈಡಲ್ಲ; ಆರೋಗ್ಯ ಸುಧಾರಣೆಗಾಗಿ ಅಲ್ಲಿ ಹೋಗಿ
ದ್ದ ಗಾಂಧಿಜೀಯ ಇದ್ದ ಆರೋಗ್ಯವೂ ಸೂರೆಯಾಗುವ ಅಪಾಯ
ಕಂಡುಬಂತು. ಸರೋಜಿನೀದೇವಿ ಕೂಡಲೇ ಅಲ್ಲಿಗೆ ಧಾವಿಸಿದರು; ಸೆರ
ಗನ್ನು ಸೊಂಟಕ್ಕೆ ಬಿಗಿದು ಲಾಠಿಧರಿಸಿ ಬಾಗಿಲಲ್ಲೇ ನಿಂತರು.
ಧುರೀಣ–ದೂತರೆಂಬ ವ್ಯತ್ಯಾಸವಿಡದೆ, ಕಣ್ಣು ಮುಖ ನೋಡದೆ "ಏನು,
ಸಮುದ್ರದ ಗಾಳಿಸೆಳೆದಾದರೂ ಸರಾಗಗೊಳ್ಳುವೆನೆಂದು ಬಂದ ರಾಷ್ಟ್ರದ
ಶ್ವಾಸವನ್ನೂ ಈ ರೀತಿ ತಡೆಗಟ್ಟುವಿರಾ?" ಎಂದು ಲಂಕಿನಿಯಾಗಿ ಲಾಠಿ
ಬೀಸಿ ಬಂದ ಬಂದವರನ್ನೆಲ್ಲಾ ಚದರಿಸಹತ್ತಿದರು. ಅವರಿಗೆ ಸಲುಗೆ
ಕೊಡುತ್ತಿದ್ದ ಗಾಂಧಿಜೀಯತ್ತ ತಿರುಗಿ "ನಾನು ನಿಮ್ಮ ತಾಯಿಯಾಗಿ
ರುತ್ತಿದ್ದರೆ ಚಾಟಿಯಿಂದ ಬಾರಿಸಿ ನಿಮ್ಮೀ ಹುಡುಗಾಟಿಕೆ
ಯನ್ನೆಲ್ಲಾ ನಿಲ್ಲಿಸಿಬಿಡುತ್ತಿದ್ದೆ" ಎಂದು ಜಬ್ಬರಿಸಿದರು. ಗಾಂಧಿ
ಜೀ ಆಗ ನಗೆ ಸೂಸಿದರು—'ತಾಯಿಯಾಗುವಳಂತೆ, ಜಂಭದ
ಕೋಳಿ' ಎಂದಲ್ಲ; 'ಈಗಲೂ ಈಕೆ ನನ್ನ ತಾಯಿಯಲ್ಲವೇ?'
ಎಂದು ತುಸು ಕೌತುಕದಿಂದ. ಈ ಶರಧಿಗಂಭೀರೆ ಅಲ್ಲಿಲ್ಲದಿರುತ್ತಿದ್ದರೆ, ಆ
ಸಮುದ್ರದಿಂದಲೇ ಗಾಂಧಿಜೀಯ ಆರೋಗ್ಯಕ್ಕೆ ಬೇಕಾಗುವ ಹವಾಮಾನ
ನಿರ್ಮಿಸಲಾಗುತ್ತಿರಲಿಲ್ಲ. ಆ ಮೇಲೆ ಕಾಂಗ್ರೆಸ್ ನಾಯಕರೆಲ್ಲರ ಬಿಡು
ಗಡೆಯಾಯಿತು; ಸ್ವಾತಂತ್ರ್ಯದಾನ ಸಿದ್ಧತೆ ನಡೆಯಹತ್ತಿತು; ಬ್ರಿಟಿಷ್
ಮಂತ್ರಿಸಮಿತಿ ಬಂತು; ಕಾಂಗ್ರೆಸ್ ಲೀಗ್ ಸಂಧಾನ ಮಾತುಕತೆಗಳು
ನಡೆದುವು; ಸ್ವಾತಂತ್ರ್ಯದಾನದ ವಾಯಿದೇ ನಿರ್ಣಯವಾಯಿತು;
ಲೋರ್ಡ್ ಮೌಂಟ್‌ಬೇಟನ್ ಬಂದರು; ರಾಷ್ಟ್ರವಿಭಜನೆಯೊಂದಿಗೆಸ್ವಾತಂ
ತ್ರ್ಯವೆಂಬ ಕೊನೆಯ ನಿರ್ಧಾರಹುಟ್ಟಿತು. ಇವೆಲ್ಲಾ ಮಹಾ ಮಂಥನ
ಗಳಲ್ಲಿಯೂ ಕಾಂಗ್ರೆಸ್ ನಾಯಕರ ಮೆದುಳು ಮತ್ತು ಹೃದಯವನ್ನು

ತಣಿಸುವ ಮಾತೃಮಮತೆಯ ಸಲಹೆ ಬೇಕಾಗಿತ್ತು; ಅದು ದೊರೆತುದು
ಸರೋಜಿನೀ ದೇವಿಯಿಂದ. ಆ ಮೇಲೆ 1947ನೇ ಅಗೋಸ್ತು 15ರಲ್ಲಿ
ಸ್ವಾತಂತ್ರ್ಯ ಸ್ಥಾಪನೆಯಾಯಿತು. ಹಿಂದೀ ಗವರ್ನರರುಗಳು ನೇಮಕ
ಗೊಂಡರು. ಸಂಯುಕ್ತ ಪ್ರಾಂತ್ಯದ ಗವರ್ನರ್ ಆಗಿ ನೇಮಿಸಲ್ಪಟ್ಟ
ವರು, ಎಷ್ಟೋವರುಷಗಳಿಂದ ಸರೋಜಿನೀ ದೇವಿಯ ಖಾಸಗೀ ಡಾಕ್ಟರ್
ಆಗಿದ್ದ ಬಂಗಾಳದ ಕಾಂಗ್ರೆಸ್ ನಾಯಕ ಡಾ| ಬಿ. ಸಿ. ರೋಯಿಗಳು.
ಆದರೆ ಆಗ ರೋಯಿಗಳು ಭಾರತದಲ್ಲಿರಲಿಲ್ಲ. 'ನೀವು ಆ ಅಧಿಕಾರ
ವಹಿಸಿಕೊಳ್ಳಬೇಕು' ಎಂದು ನೆಹರು ಮುಂತಾದವರೊತ್ತಾಯಿಸಿದರು;
ಮನಸ್ಸಿಲ್ಲದಿದ್ದರೂ ಸರೋಜಿನೀದೇವಿ ಅದಕ್ಕೊಪ್ಪಿದರು. ಪ್ರಥಮ ಹಿಂದೀ
ಸ್ತ್ರೀ ಗವರ್ನರ್ ಆದರು. ತನ್ನ ಈ ಅಧಿಕಾರಾವಧಿಯಲ್ಲಿ ಶ್ರೀಮತಿಯವರು
ಪ್ರಾಂತ್ಯದ ಮಹಿಳೆಯರನ್ನು ಹುರಿದುಂಬಿಸಿ, ಗಲಭೆ ಪೀಡಿತ ನಿರಾಶ್ರಿತ
ರಿಗೆ ಒದಗಿಸಿಕೊಟ್ಟಿದ್ದ ಸಹಾಯ ವ್ಯವಸ್ಥೆ ಮರೆಯುವಂತಹದಲ್ಲ. ಅಖಿಲ
ಭಾರತವೇ ವಿಶೇಷ ಗೌರವಾಭಿಮಾನದಿಂದ ಕಂಡಿದ್ದ ಸ್ವತಂತ್ರ ರಾಷ್ಟ್ರದ
ಪ್ರಾಂತಿಕ ಗವರ್ನರ್ ಎಂದರೆ ಸರೋಜಿನಿ ದೇವಿ. ಕಾರಣ,
ಆಕೆ ಜನತಾ ಹೃದಯದಲ್ಲಿ ಗಳಿಸಿದ್ದ ಸ್ಥಾನದಿದಿರಲ್ಲಿ ಈ ಗವರ್ನರ್
ಹುದ್ದೆಗೆ ಆಕೆಯಿಳಿದಂತೆ ಆಗಿತ್ತೇ ಹೊರತು ಏರಿದಂತಲ್ಲ. ಜನವರಿ
28ರಲ್ಲಿ ಜರಗಿದ ಲಕ್ನೋ ಯುನಿವರ್ಸಿಟಿಯ ವಿಶೇಷ ತಜತೋತ್ಸವ
ಪದವೀದಾನ ಸಮಾರಂಭದಲ್ಲಿ ಪ್ರಧಾನಿ ನೆಹರುಗಳಿಗೆ 'ಡಾಕ್ಟರ್ ಒಫ್
ಲಿಟರೇಚರ್' (ಸಾಹಿತ್ಯ ವಿದ್ವಾನ್) ಬಿರುದನ್ನಿತ್ತುದೇ ಸರೋಜಿನಿ
ದೇವಿಯು ತನ್ನಾಯುಷ್ಯದಲ್ಲಿತ್ತ ಕೊನೆಯ ಸಾರ್ವಜನಿಕ ಕೊಡುಗೆ;
ಸಮೂಹಕ್ಕೆ ಜೀವೀದೇವಿಯ ಕೊನೆಯ ಭೇಟಿ ಅದೇ.

ಮರಣ-ಬೆಳಕು

ಇನ್ನೂ ಹೇಳಬೇಕೆ? ನಿತ್ರಾಣ, ಮುಪ್ಪು, ಸಾವು, ಇವು ಪ್ರಪಂಚ
ದಲ್ಲೇ ಇಲ್ಲದೆ ಹೋಗುತಿದ್ದರಾಗುತಿತ್ತು ಎಂಬ ಬಯಕೆಯನ್ನು ಇಡೀ ಮಾನ
ವ ಜನಾಂಗದ ಹೃದಯದಲ್ಲಿ ಒಮ್ಮೆಗೇ ಮೂಡಿಸುವಂತಹ ಸಂದರ್ಭ
ಗಳಲ್ಲಿ ಇದು ಒಂದು—ಸರೋಜಿನಿದೇವಿ ತನ್ನ ಪ್ರಾಣವನ್ನು ಕೆಮ್ಮಿದುದು!
ಕಳೆದ ಫೆಬ್ರವರಿ 10ರವರೆಗೆ ಅವರನ್ನು ನೋಡಿದವರು ಈ ದೇಹ

ಗವರ್ನರ್ ಪೀಠದಿಂದ ಭಾರತಾಧ್ಯಕ್ಷ ಗಾದಿಗೇರುವಂತಹದೆಂದು ನಿರೀಕ್ಷಿಸಬಹುದಿತ್ತೇ ಹೊರತು, ಮಾರ್ಚ 2ರಲ್ಲಿ ಚಿತೆಯನ್ನೇರುವಂತಹದೆಂದು ನಂಬಲಾಗುತ್ತಿರಲಿಲ್ಲ. ಒಳ್ಳೇ ಆರೋಗ್ಯದಿಂದಿದ್ದರು. ಆದರೆ ಫೆಬ್ರುವರಿ 11ರಲ್ಲಿ ದಿಲ್ಲಿಗೆ ಹೋಗುಟು ರೈಲುಹತ್ತುವ ದೇವಿಯನ್ನು ಕಂಡಾಗ "ಇವರೇನು ಹೀಗಾಗಿ ಹೋದರು !" ಎಂದು ದಿಗಿಲುಗೊಳ್ಳುವಷ್ಟು ಕಂದಿ ಹೋಗಿದ್ದರು; ರೈಲಿನಲ್ಲಿ ವಾಂತಿಯೂ ಆಯಿತು; ಆದರೂ ಬಿಡದೆ ತನ್ನ ನಿಶ್ಚಿತ ಕಾರ್ಯಕ್ರಮಗಳನ್ನು ಮುಗಿಸಿ ಫೆಬ್ರುವರಿ 15ರಲ್ಲಿ ದಿಲ್ಲಿಯಿಂದ ಲಕ್ನೋವಿಗೆ ಮರಳುವಾಗ ತಲೆಯಲ್ಲೊಂದು ತೀಕ್ಷ್ಣನೋವನ್ನು ಹೊತ್ತುಕೊಂಡೇ ಬಂದಿದ್ದರು. ನರನಾಡಿಗಳಲ್ಲಿ ರಕ್ತಾವರೋಧ--190/128ರಷ್ಟು ರಕ್ತದೊತ್ತಡ! ಡಾಕ್ಟರರು ಪೆನ್ಸಿಲಿನ್ ಮೊದಲಾದ ಅಮೂಲ್ಯ ಚಿಕಿತ್ಸಾವಿಧಾನ ಕೈಕೊಂಡು ರಕ್ತದೊತ್ತಡವನ್ನು ತಾ 17ರಲ್ಲಿ 150/104ಕ್ಕೆ ತಗ್ಗಿಸಿದರೂ ಅದು ಚಂಡಿಹಿಡಿಯಿತು—ಧ್ವಂಸಕರ ಪಂಗ್ತಿಗೆ ಸೇರಿತು—ರಾಷ್ಟ್ರೀಯ ವಿಪತ್ತನ್ನೊಡ್ಡುವ ಹಠ ತೊಟ್ಟಿತು—ಮರುದಿನವೇ 200/120ಕ್ಕೇರಿತು!

ಒಂದು ಅಮೂಲ್ಯ ಜೀವವನ್ನು ಗೆದ್ದುಕೊಳ್ಳುವದಕ್ಕೂ ಮುಂದೊತ್ತದಂತೆ ಮೃತ್ಯುವನ್ನು ಹಿಮ್ಮೆಟ್ಟಿಸಿ ಬಿಡಬೇಕೆಂದು ಫೆಬ್ರುವರಿ ತಾ 20ರಿಂದ 2ರ ವರೆಗೆ ತಜ್ಞಡಾಕ್ಟರರ ಮಂಡಲಿ ಕೊಟ್ಟ ಹೋರಾಟವೇನೂ ಸಾಮಾನ್ಯದ್ದಲ್ಲ. ಡಾ। ಯಸ್.ಯ.ಸ್- ಮಿಶ್ರ, ಡಾ। ಬಿ. ಬಿ. ಭಾಟಿಯಾ, ಡಾ| ಅಬ್ದುಲ್ ಹಮೀದ್, ಡಾ। ಬಿ. ಸಿ. ಯೋಯಿ ಮೊದಲಾದವರು ಸಾಧ್ಯವಿದ್ದ ಪ್ರಯತ್ನಗಳನ್ನೆಲ್ಲಾ ಮಾಡಿ, ಹೆಚ್ಚಿನ ದುಶ್ಚಿಹ್ನೆಗಳನ್ನೆಲ್ಲಾ ನಿವಾರಿಸಿದರು. ಉಬ್ಬಸವೊಂದು ಪತ್ತೂ ಉಳಿದಿತ್ತೆಂದು ತಾ. 28ರಲ್ಲಿ ಅದೇ ಮೊದಲ ಬಾರಿ 'ಓಕ್ಸಿಜನ್' ಕೊಟ್ಟರು.ಆಗೊಮ್ಮೆ ಎಲ್ಲಾ ಯಾತನೆಯಿಂದಲೂ ಬಿಡುಗಡೆಗೊಂಡವರಂತೆ ತೋರಿದರು ಸರೋಜಿನಿ. ಆದರೆ ಮಾರ್ಚ 1ರಲ್ಲಿ ಪುನಃ ತೀಕ್ಷ್ಣ ತಲೆಸಿಡಿತ ಕಾಣಿಸಿಕೊಂಡಿತು. ರಾತ್ರಿ 9-30ಕ್ಕೆ ಹಾಳು ರಕ್ತ ಶೋಷಿಸಿದರು; ಆಗ ತಲೆಸಿಡಿತ ನಿಂತಿತು. 10ಕ್ಕೆ ನಿದ್ರೆ ಬರುವ ಇಂಜಕ್ಶನ್ ಕೊಟ್ಟರು; ಸರೋಜಿನಿಗಾಗ ಯಾವ ತೊಂದರೆ ಹಿಡಿಯಿತೋ; 'ಇನ್ನೂ ನಿದ್ರಿಸುವದು ಏಳುವದು ಹೌದೆ?

ಡಾಕ್ಟರರ ಇಚ್ಛೆ ಏಳಲಾಗುವ ನಿದ್ರೆ ಬರಿಸುವದಾದರೂ, ನಾನೀಗ ಆ ಬೀಳುವವೇಳುವ ತಂಟೆಯಿಂದ ಪಾರಾಗುತಿದ್ದೇನೆ' ಎಂದು ದೇವಿಗೆ ಆಗಲೇ ಹೊಳೆಯಿತೋ ಏನೋ! ಘಂಟೆ 10-40ಕ್ಕೆ ತನ್ನ ದಾದಿ ಶ್ರೀಮತಿ ಪಿ. ಶರ್ಮರನ್ನು ಕರೆದು ಕೆಲವು ಪದ್ಯಗಳನ್ನು ಹಾಡುವಂತೆ ಹೇಳಿದರು: "ನಿನಗೆ ಉಪದ್ರ ಕೊಟ್ಟೆ-ಬಹಳ ಪಶ್ಚಾತ್ತಾಪಪಡುತ್ತೇನೆ. ನನ್ನೊಡನೀಗ ಯಾರೂ ಮಾತಾಡಬಾರದು; ನನ್ನನ್ನಾರೂ ಮುಟ್ಟಕೂಡದು" ಎಂದವರೇ ತನ್ಮಯತೆಯಿಂದ ಆ ಗೀತೆಯನ್ನಾಲಿಸುತ್ತಾ ತಾಸು 11-30ಕ್ಕೆ ಅಲ್ಲಿಯೇ ನಿದ್ರೆ ಹೋದರು; ನಡು ರಾತ್ರಿ ಕಳೆಯಿತು. ತಾಸು 2-30 ಆಗುವಾಗ ದೇವಿ ಎದ್ದು ಕುಳಿತರು. ಹಾಜರಿದ್ದ ಡಾಕ್ಟರರು ಪರೀಕ್ಷೆ ಮಾಡಿದ್ದಾಯಿತು. ಘಂಟೆ 3-30ಕ್ಕೆ ಕೆಮ್ಮು ಬಂತು; ಮೇಲಿಂದಮೇಲೆ ಬಂತು; ಕೆಮ್ಮುತ್ತಲೇ ಮೂರ್ಛೆಗೊಂಡಂತಾಗಿ ಜೀವವನ್ನೇ ಕೆಮ್ಮಿದರು!

1949ನೇ ಮಾರ್ಚ ತಾ. 2ನೇ ಬುಧವಾರ ಪೂರ್ವಾಹ್ನ ತಾಸು 3-30ಕ್ಕೆ.

ಪ್ರಾಣ ಬಿಡುವಾಗ ಅವರ ಪಕ್ಕದಲ್ಲಿದ್ದುದು ಆ ದಾದಿಯೊಬ್ಬಳೇ. ದೇವಿಯ ಅತಿ ಪ್ರೀತಿಯ ಮಗಳು—ಬೆಳೆದವಳಾದರೂ ತಾಯಿಹಕ್ಕಿಯ ರೆಕ್ಕೆ ಬಿಸಿ ಬಿಡದ ಪಿಳ್ಳೆಯಂತೆ ಸದಾಕಾಲ ಮಾತೆಯ ಜತೆಯಲ್ಲೇ ಇದ್ದವಳು—ಕುಮಾರಿ ಪದ್ಮಜಾ ನಾಯಿಡು ಕಮಲಾನೆಹರೂ ಸ್ಮಾರಕಾಸ್ಪತ್ರೆಯೊಂದರ ಉದ್ಘಾಟನಾ ಸಮಾರಂಭದಲ್ಲಿ ಹಾಜರಿರಲು ಮೊದಲ ದಿನವೇ ಅಲ್ಲಹಾಬಾದಿಗೆ ಹೋಗಿದ್ದರು. ಆಕೆಗೂ ಆ ಸಮಾರಂಭದ ಉದ್ಘಾಟಕರಾಗಿ ಬಂದಿದ್ದ ಗವರ್ನರ್ ಜನರಲ್ ರಾಜಾಜೀ, ತನ್ನೂರ ಸಮಾರಂಭವಿದನ್ನು ನೆರವೇರಿಸಲು ಬಂದಿದ್ದ ಪ್ರಧಾನ ಮಂತ್ರಿ ನೆಹರು— ಸಂಯುಕ್ತ ಪ್ರಾಂತ್ಯದ ಪ್ರಧಾನಿ ಪಂತ್—ಎಲ್ಲರಿಗೂ ಅಲ್ಲಿಯೇ ಈ ವಾರ್ತಾಸಿಡಿಲು ಬಡಿಯಿತು. ತಾಯಿ, ಅಕ್ಕನನ್ನು ಕಳಕೊಂಡ ಈ ನಾಲ್ವರೂ ಕೂಡಲೇ ಅಲಹಾಬಾದಿನಿಂದ ಲಕ್ನೋವಿಗೆ ಹಾರಿಬಂದರು. ಅವರೊಂದಿಗೆ ಲೇಡಿ ಮೌಂಟ್‌ಬೇಟನ್ ಮತ್ತು ಪಮೇಲಾ ಮೌಂಟ್‌ಬೇಟನ್ ಇದ್ದರು. ಅಲ್ಲಿ ಇಳಿದೊಡನೆಯೇ ಕುಮಾರಿ ಪದ್ಮಜಾಳನ್ನು ದುಃಖದ ಸುಂಟರಗಾಳಿಯು, ಸರಕಾರೀ ಭವನದ ಮೆಟ್ಟಲುಗಳಿಂದ ಹಾರಿಸಿಕೊಂಡು ಹೋಗಿ

ತಾಯಿಯ ಶವದ ಮೇಲೆ ಧೊಪ್ಪನೆ ಕೆಡವಿತು. ಮಂತ್ರಿಗಳು, ಹೈಕೋರ್ಟ್ ಜಡ್ಜರುಗಳು, ಪ್ರಮುಖರುಗಳು ಮತ್ತು ಸ್ತ್ರೀಪುರುಷರು ಓಡೋಡಿ ಬಂದರು; ಹೆಚ್ಚಿನವರ ಕಣ್ಣಲ್ಲಿ ನೀರಿಳಿಯುತಿತ್ತು. ಜನದೊತ್ತಡ ಬೇಡವೆಂದು ಸರಕಾರೀ ಭವನದ ಕಬ್ಬಿಣದ ಗೇಟನ್ನು ಹಾಕಿದ್ದರೂ, ಎತ್ತರದ ಪಾಗಾರ ಹಾರಿ ಶವದರ್ಶನಕ್ಕಾಗಿ ಜನ ನುಗ್ಗಿದ್ದಿತು. ಸಾಯಂಕಾಲ 4-10ಕ್ಕೆ ಶವಮೆರವಣಿಗೆ ಹೊರಟಿತು; ಸರಕಾರೀ ಭವನದಿಂದ ಗೋಮತಿ ಹೊಳೆ ದಡದ ವರೆಗೂ ರಸ್ತೆಯುದ್ದಕ್ಕೂ ಜನಸಂದಣಿಯೇ. ಹೆಚ್ಚಿನ ಕಣ್ಣುಗಳು ತುಂಬಿಕೊಂಡಿದ್ದುದರಿಂದ ಶವವೂ ಅವಕ್ಕೆ ಸಮುದ್ರದಂತೆ ತೋರಿರಬೇಕು. ಗೋಮತಿ ಕಿನಾರೆಯ ಎತ್ತರದ ದಿನ್ನೆಯಲ್ಲಿ ಚಿತೆಯೇರಿಸಿದ್ದರು; 70 ಸಾವಿರಕ್ಕೂಮಿಕ್ಕಿದ ಜನ ತಬ್ಬಲಿಗಳಂತೆ ಮೂಕರಾಗಿ ಕುಳಿತು ತಾಯಿಯ ದಹನಕ್ರಿಯೆಗಳನ್ನು ನೋಡುತಿದ್ದರು. ಹೊಟ್ಟೆಯಲ್ಲಿ ಬಂದ ಗಂಡು ಮಗ ಜಯಸೂರ್ಯ, ಮೇಜರ್ ಜನರಲ್ ಥಿಲ್ಲೋನ್ ಮತ್ತು ಮೇಜರ್ ಭಾಟಾನಗರ್‌ರ ಸಹಾಯದಿಂದ ಶವಪೆಟ್ಟಿಗೆಯನ್ನು ಚಿತೆಯಲ್ಲಿಟ್ಟರು; ಮಂತ್ರಘೋಷಗಳಾದುವು. ಪದ್ಮಜಾ, ಇಂದಿರಾ ಗಾಂಧಿ, ನೆಹರು, ರಾಜಾಜಿ, ಪಂತ್, ಅಜಾದ್, ಚೈನದ ರಾಯಭಾರಿ, ಸತಿಪುತ್ರ ಮೌಂಟ್‌ಬೇಟನರು, ಮುಂತಾದವರೆಲ್ಲಾ ಚಿತೆಯ ಬಳಿ ಕುಳಿತಿದ್ದರು; ಮಂತ್ರಧ್ವನಿಗಳಾಗುತಿದ್ದಂತೆ ಮಗ ಜಯಸೂರ್ಯ ಚಿತೆಗೆಮೂರು ಸುತ್ತು ಬಂದು ಬೆಂಕಿಕೊಟ್ಟ; ದೇಹ ಉರಿದುಹೋಯಿತು. ಆದರೆ ಅಖಿಲ ಭಾರತೀಯ ಬಂಧುಭಗಿನಿಯರ ಹೃದಯವೀಗಲೂ ಸುಡುತ್ತಿದೆ..

೦೦ ೦೦

ಸರೋಜಿನಿದೇವಿ ಹೊರಟುಹೋದರು—ಅವರ ಕಾಯ ಬೂದಿಯಾಯಿತು—ಆದರೆ ಪ್ರಕಾಶರೂಪಿ ಸರೋಜಿನಿಯಿದ್ದಾರೆ. ಭಾರತ ಕೋಗಿಲೆ, ರಾಷ್ಟ್ರಮುಂದಾಳು, ಅಗ್ರಗಣ್ಯ ಮಹಿಳಾನಾಯಕಿ, ಇಂಗ್ಲಿಷ್ ಪ್ರಪಂಚದಿಂದಲೇ ಗೌರವಗಳಿಸಿದ ಎರಡೇ ಮಂದಿ ಭಾರತೀಯ ಕವಯಿತ್ರಿಯರಲ್ಲೊಬ್ಬಳು; ವಿನೋದ ಚಿಕಿತ್ಸಕಿಯೆಂದು, ಅಪ್ರತಿಮವಾಗ್ಮಿಯೆಂದು, ಯಾವ ಕಸಕಲ್ಮಷವೂ ಇಲ್ಲದ ನಿಲ್ಲದ ಸಮುದ್ರ ಹೃದಯಿಯೆಂದು ಲೋಕಕ್ಕೆ ಪರಿಚಯವಾದವರು--ಇಂಥವರು 'ಇನ್ನಿಲ್ಲ"ವೆಂದಾಡೀತೇ?

ಅವರ ಜೀವನದ ವರುಷಗಳು ಕಳೆದಂತೆ ಈ ಕಾಯವೂ ಕಳೆದುಹೋಯಿತು; ಅಷ್ಟೆ. ಸರೋಜಿನಿ ಸತ್ತ ಮರುದಿನ ಪ್ರಧಾನಮಂತ್ರಿ ನೆಹರೂಗಳು ಭಾರತ ಪಾರ್ಲಿಮೆಂಟಿನಲ್ಲಿ “ಭಾರತಾಂಬೆಯು ಗತಕಾಲದಲ್ಲಿ ಹೆತ್ತಂತೆ ಭವಿಷತ್ಕಾಲದಲ್ಲೂ ಮಹಾ ಮಹಾ ಗಂಡು ಹೆಣ್ಣು ಮಕ್ಕಳನ್ನು ಹೆರಬಲ್ಲಳೆಂಬುದು ನಿಸ್ಸಂದೇಹ. ಆದರೂ ಆಕೆ ಸರೋಜಿನಿಯಂತಹ ಇನ್ನೊಂದು ರತ್ನವನ್ನು ಹಡೆದಾಳೆ, ಪಡೆಯಲು ಸಾಧ್ಯವೇ ಎಂದು ನನಗೆ ಸಂದೇಹವಿದೆ” ಅಂದಿದ್ದರು. ಈ ಸಂದೇಹ ಎಲ್ಲರಿಗೂ ಇದೆ; ಆದರೆ ಜನತಾ ಹೃದಯಕ್ಕೆ ಪರಿಚಯವಾಗಿರುವ ಸರೋಜಿನಿ ಚಿರಂಜೀವಿಯಿದ್ದಾಳೆ. ಗಾಂಧಿಜೀ ಮಡಿದಾಗ “ನನ್ನ ಬಾಪು, ನನ್ನ ತಾಯಿ, ನನ್ನ ನೇತಾ ಹೋದರೆಂದು ನಾನಳುವದಿಲ್ಲ; ಯಾಕೆ, ನಮ್ಮಿಂದ ಇನ್ನೂ ಕಷ್ಟಪಡಕೊಂಡು ಉಣ್ಣಲು ಅವರು ಇರಬೇಕಿತ್ತೆ? ಹೋದುದು ಒಳ್ಳೆಯದಾಯಿತು; ಅಲ್ಲಿಯಾದರೂ ಅವರು ಶಾಂತಿಯನ್ನನುಭವಿಸಲಿ” ಎಂದ ಸರೋಜಿನೀ ಮಾತನ್ನೆ ನಾವೀಗ ಮರಳಿ ಅವರಿಗೇನೇ ಹೇಳಿದರಾಗದೆ?

ಆದರೆ ಸರೋಜಿನಿಯು ಆದರ್ಶ ಮಾತ್ರ ಬೇಕು; ಅದು ಇಲ್ಲಿ ನಿಲ್ಲದೆ ನಿರ್ವಾಹವಿಲ್ಲ. ಸರೋಜಿನೀ ಆದರ್ಶದಲ್ಲಿ ಗಾಂಧಿಜೀಯ ಆದರ್ಶದಂತೆ ಸಂಯಮ, ತಪಸ್ಸು, ಏನೂ ಇಲ್ಲ; ನಿಯಂತ್ರಣ ಹಾಕಿಕೊಳ್ಳುವ ಬದಲಿಗೆ ಇದ್ದ ಶಕ್ತಿ ಯೋಗ್ಯತೆಗಳನ್ನೆಲ್ಲಾ ಸರಿಯಾಗಿ ವಿಕಾಸಿಸಿಕೊಂಡುದೊಂದೇ ಸರೋಜಿನಿಯ ಆದರ್ಶ. ‘ಬೆಳೆಯಬೇಕು ಅರಳಬೇಕು’ ಎಂಬುದೇ ಅವರ ಸಂದೇಶ. ಬೇಡವೆ? ಎಲ್ಲರಿಗೂ ಆಗುವಂತಹದಿದು ಬೇಕು; ಚಿರಕಾಲಕ್ಕೂ ಬೇಕು. ಸರೋಜಿನಿ ಚಿರಂಜೀವಿಯಾಗಬೇಕು.



ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ-

O. S. No. 663/1948.   R. I. A. No. 1996/1948.

ವಾದಿ – ಮಹಾಬಲ ಶೆಟ್ಟಿ, ಪಟೇಲ್ ಅಂತಯ್ಯ ಶೆಟ್ರ ಮಗ, ಕಾವರಾಡಿ ಗ್ರಾಮದ ಕಂಡ್ಲೂರಲ್ಲಿರುವವರು.

ಪ್ರತಿವಾದಿರು. 1 ಶೀನಪ್ಪ ಶೇರ್ವೆಗಾರ, ಹಲ್ತೂರು ವೆಂಕಪ್ಪ ಶೆಟ್ರ ಅಳಿಯ, ಉಳ್ತೂರು ಗ್ರಾಮದ ಹಲ್ತೂರು.

2 ಮುರಜಮ್ಮ ಶೆಡ್ತಿ, 1ನೇ ಪ್ರತಿವಾದಿಯ ಹೆಂಡ್ತಿ, ಹೆಗ್ಗುಂಜೆ ಗ್ರಾಮ.

ಸದ್ರಿ 1ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ, ನೀವು ಕೂಡಾ ಪ್ರತಿವಾದೀರು ವಾದಿಯ ಪೂರ್ವಾಧಿಕಾರಿ ಶೀರೂರು ಹೊಳೆಬಾಗ್ಲು ಸಂಕಮ್ಮ ಶೆಡ್ತಿ ಮಗಳು ಬಾಗಿಶೆಡ್ತೀಗೆ ತಾ. 15-4-1947ರಲ್ಲು ರೂ. 1411-8-0ಕ್ಕೆ ಬರಕೊಟ್ಟ ಡಿಮಾಂಡ್ ನೋಟನಲ್ಲಿಯ ಬಡ್ಡಿ ಹಣ ವಸೂಲಿ ಹಕ್ಕನ್ನು ತಾ. 5-12-1948ರಲ್ಲು ಟ್ರಾನ್ಸ್ಫರ್ ಪಡೆದು ವಾದಿಯು ನಿಮ್ಮ ಮೇಲೆ ರೂ. 1518-8-0ನ್ನು ಬರಮಾಡಿಕೊಳ್ಳುವರೇ ದಾಖಲು ಮಾಡಿದ ಮೇಲಿನ ದಾವೆ ವ ನಿಮ್ಮ ಹಕ್ಕಿನ ಸ್ತಿರ ಆಸ್ತಿ ಕೈಫೇತು ಜಪ್ತು ಮಾಡಬೇಕಾಗಿ ಕೊಟ್ಟ ಮೇಲಿನ ಜಪ್ತಿ ಅರ್ಜಿ ಸಹಾ ತಾ. 8-3-1949ಕ್ಕೆ ತನ್ಕಿಗೆ ಇಟ್ಟಿರುವುದರಿಂದ ಈ ಬಾಬಿನಲ್ಲಿ ನಿಮ್ಮ ಉದಾಹರಣೆ ವ ಆಕ್ಷೇಪ ಇರುವ ಪಕ್ಷದಲ್ಲಿ ತನ್ಕಿ ದಿವ್ಸ ಪೂರ್ವಾಹ್ನ 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಗೈರಹಾಜರಿ ಎಂತ ತೀರ್ಮಾನಿಸಿ ನಿಮ್ಮ ಮೇಲೆ ಕೂಡಾ ಸದ್ರಿ ದಾವೆಯಲ್ಲಿ ಫೈಸಲ್ ಆಗುವದೆಂತ ತಿಳಿದಿರತಕ್ಕದ್ದು.

ಕುಂದಾಪುರ,   **Soorappa Shetty, Kolkebail**

ತಾ. 18-2-1949.   Advocate for Plaintiff,

Notice

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. 2/49

ವಾದಿ- ಅಂತಯ್ಯ ಸೆಟ್ಟಿ.

ಪ್ರತಿವಾದಿರು- ಯಂಕಿ ಹೆಂಗ್ಸು ಸಹಾ

ಸದ್ರಿದಾವೆಯು, 2ನೇ ಪ್ರತಿವಾದಿಗೆ ತಿಳಿಯಪಡ್ಸಿದ್ದು.

2ನೇ ಪ್ರತಿವಾದಿ- ಮುಡೂರ, 1ನೇ ಪ್ರತಿವಾದಿಳು ಯಂಕಿ ಹೆಂಗ್ಸಿನ ಮಗ. ಹಳೆಪೈಕ ಜಾತಿ- ಕುಂದಾಪುರ ತಾಲ್ಕು ಬಿಜೂರು ಗ್ರಾಮದ ಕಾಡಿನತಾರು.

ವಾದಿಯು ತನಗೆ ಪ್ರತಿವಾದಿರಿಂದ ಬಹ ಚಾಲಗೇಣಿ ಗೇಣಿಬಾಕಿ ಐವೇಜು ರೂಪ್ಯಾ 39-15-7ನ್ನು ಬರಮಾಡಿಕೊಳ್ಳುವರೇ ದಾಖಲ್ಲುಮಾಡಿದ ಮೇಲಿನ ದಾವೆ ತಾರೀಕು 14-3-49ಕ್ಕೆ ಯಿಟ್ಟಿದೆ. ಆ ಕುರಿತು ನಿಮ್ಮ ಉದಾಹರಣೆಯಿದ್ದರೇ ಸದ್ರಿ ದಿವ್ಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಾಣ್ಸದ ಕೋರ್ಟಿನ ಮುಂದೆ ಹಾಜ್ರಾಗಿ ತಿಳಿಸತಕ್ಕದ್ದು ಎಂಬಸಂಗ್ತಿ ಈ ಮೂಲ್ಕ ತಿಳಿಯಪಡ್ಸಿರುತ್ತದೆ.

ತಾರೀಕು 26—2—49
ಮೊಕ್ಕಾಂ. ಕುಂದಾಪುರ

Y. Manjaya Shetty
Advocate for Plff,

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 603/48 R. I. A. 1993/48

ಎ. ಬಚ್ಚ ಮರಕಾಲ. ವಾದಿ.

ಶೇಶ ಮರಕಾಲ ಕೂಡ. ಪ್ರತಿವಾದಿರು.

೩ನೇ ಪ್ರತಿವಾದಿ ದೂಮ ಮರಕಾಲ, ದಾರಮ್ಮ ಹೆಂಗ್ಸಿನ ಮಗ. 4ನೇ ಪ್ರತಿವಾದಿ ಸದಿಯ ಮರಕಾಲ. ನಾರಾಯಣ ಮರಕಾಲನ [illegible]. 24ನೇ ಪ್ರತಿವಾದಿ ಕೊರಗ ಮರಕಾಲ, ಬಚ್ಚ ಮರಕಾಲನ ಅಳಿಯ. 27ನೇ ಪ್ರತಿವಾದಿ ಕುರುಡ ಮರಕಾಲ, ಮಹಾಲಿಂಗ ಮರಕಾಲನ ಅಳಿಯ. 40ನೇ ಪ್ರತಿವಾದಿ ನಾರಾಯಣ ತಂಡೇಲ. ಅಣ್ಣಪ್ಪ ತಂಡೇಲನ ಮಗ. 43ನೇ ಪ್ರತಿವಾದಿ ಶೇಶ ಮರಕಾಲ, ಸೋಮಮರಕಾಲನ ತಮ್ಮ. ಎಲ್ಲಾ ಪ್ರತಿವಾದಿರು ಉಡ್ಪಿತಾಲ್ಲೂಕ ಕೋಡಿಗ್ರಾಮದಲ್ಲಿರುವರು, ಪೋಷ್ಟು ಹಂಗಾರಕಟ್ಟೆ. ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ.

ವಾದಿಯು ರಿಜಿಸ್ಟ್ರನಿಶಿ ಬರ್ಕೊಂಡ ಈಡುದಸ್ತಾವೇಜಿನ ಬಾಬ್ತು ವಾದಿಗೆ ಬರ ಬಾಕಿ ಅಸಲು ಬಡ್ಡಿ ಆ್ಯವೇಜನ್ನು ಬರಮಾಡಿ ಕೊಳ್ಳುವ ಬಗ್ಗೆ ವಾದಿಯು ನೀವು ವಗೈರರಮೇಲೆ ಮಾಡಿದ ದಾವೆಯು ಮತ್ತು 42ನೇ ಪ್ರತಿವಾದಿ ಸೋಮ ಮರಕಾಲನು ದಾವೆಯು ತನ್ಕಿ ಮಧ್ಯಕಾಲದಲ್ಲಿ ಮೃತಪಟ್ಟಿರುವುದರಿಂದ ಆತನ ವಾರಿಸ್‌ದಾರನನ್ನಾಗಿ 43ನೇ ಪ್ರತಿವಾದಿಯನ್ನು ಸೇರ್ಸಿಕೊಳಬೇಕಾಗಿ ದಾಖಲ್ಲ ಮಾಡಿದ ಮೇಲ್ಕಾಣಿಸಿದ ಅರ್ಜಿಯು 11-3-49ಕ್ಕೆ ತನ್ಕಿಗೆ ಯಿಟ್ಟಿರುವುದರಿಂದ ಸದ್ರಿ ದಾವೆಯು ಅರ್ಜಿಯು ಕುರಿತು ತಕ್ರೀರು ದಾಖಲ್ಲ ಮಾಡುವಂತಾದ್ದಿದ್ರೆ ನೀವು ಸದ್ರಿ ದಿವ್ಸ 11 ಗಂಟೆಗೆ ಮೇಲ್ಕಾಣ್ಸಿದ ಕೋರ್ಟಿನ ಮುಂದೆ ಸ್ವತ: ವ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಎಕ್ಸ್ ಪಾರ್ಟಿಮಾಡಿ ಮೇಲ್ಕಾಣಿಸಿದ ದಾವೆಯು ವ ಅರ್ಜಿಯು ತೀರ್ಮಾನಿಸಲ್ಪಡುತ್ತದೆಂತ ಈ ಮೂಲಕ ತಿಳಿಸೋಣಾಗುತ್ತದೆ.

Coondapoor **K. Soorappa Shetty,**
21-2-1949- Advocate for Plff.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. 139/48 O. S. 331/ 1935

ಸಂಜೀವಸೆಟ್ಟಿ, ಕೊಳ್ಕೆಬೈಲು —ಅಮ್ಲುಜಾರಿ ಅರ್ಜಿದಾರ.

ಮತ್ತು

ಶ್ರಿನಿವಾಸ ಹತ್ವಾರ ಕೂಡಾ --ಎದ್ರಿರು.

10ನೇ ಎದ್ರಿ ಲಕ್ಷಿನಾರಾಯಣ ಹತ್ವಾರ, ವೆಂಕಟಾಚಲ ಹತ್ವಾರರ ಮಗ

13 ನೇ ಎದ್ರಿ-- ಅಕ್ಕಯ್ಯಮ್ಮ – ಸುಬ್ಬಣ್ಣ ಹತ್ವಾರ ವಿಧವೆ, ಕುಂದಾಪುರ ತಾಲೂಕು ತೆಕ್ಕಟ್ಟೆ ಗ್ರಾಮದಲ್ಲಿರುವವರು—

ಅಮ್ಲುಜಾರಿ ಅರ್ಜಿದಾರನು 10-13 ನೇ ಎದ್ರಿರ ಕುಟುಂಬದ ಹಕ್ಕಿನ ಸ್ಥಿರ ಆಸ್ತಿಯನ್ನು ಲೈಲಾವು ಮಾಡಿಸುವಗೋಸ್ಕರ ಜಪ್ತು ಮಾಡಿಸಿದ್ದಾರೆಂತಲೂ, ಆ ಕುರಿತು ಆಕ್ಷೇಪವಿದ್ದರೆ ತಾ 22-3-49ನೇ ದಿವ್ಸ ಕೋರ್ಟಿನ ಮುಂದೆ ಹಾಜ್ರಾಗಿ ಜಾಹಿರ ಮಾಡಿಕೊಳ್ಳತಕ್ಕದ್ದೆಂತಲೂ, ತಪ್ಪಿದ್ರೆ ಮುಂದಿನ ಹುಕುಮು ಆಗುವುದೆಂತಲೂ ಸದ್ರಿ 10-13ನೇ ಎದ್ರಿರಿಗೆ ಈ ಮೂಲ್ಕ ತಿಳಿಸೋಣಾಗುತ್ತದೆ.

G. Sangiva Rao.

ತಾ 22-2-49, ಕುಂದಾಪುರ. Vakil for Petitioner.

ಉಡುಪಿ ಶ್ರೀ ಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ
ಮಹಾ ಪಾಠಶಾಲೆಯ ಜ್ಯೋತಿಷ ಪಂಡಿತ ಕೆ. ನರಸಿಂಹ
ಉಪಾಧ್ಯಾಯರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ವಿರೋಧಿ ಸಂವತ್ಸರದ

(1949—1950)

ನವಯುಗ ಪಂಚಾಂಗ,

ಉಡುಪಿ.

ನಿತ್ಯ ಪಂಚಾಂಗವಲ್ಲದೆ ಸರ್ವರಿಗೂ ಬೇಕಾದ
ಹಲವಾರು ಉಪಯುಕ್ತ ವಿಷಯ ಸಂಗ್ರಹಗಳಿವೆ.

ಪುಟಗಳು 68 **ಬೆಲೆ** **0—5—0** ಮಾತ್ರ.
25 **ಪ್ರತಿಗಳಿಗೆ** **6—4—0**
50 ,, **11—0—0**
100 ,, **20—0—0**

ಸೂಕ್ಷ್ಮಗಣಿತ ದ್ವಾರಾ ಸಂಗ್ರಹಿತವಾದ ಮೇಷಾದಿ ದ್ವಾದಶ
ರಾಶಿಯವರ ವರ್ಷಭವಿಷ್ಯವಿದೆ.

ನಗದು ವ್ಯವಹಾರ, ಲಾಗವಾಡು ಪ್ರತ್ಯೇಕ.

ಒಂದು ಪ್ರತಿ ಬೇಕಾದವರು 0—6—0 ಸ್ಟಾಂಪು ಕಳಿಸಬೇಕು.

ಮೆನೇಜರ್, ನವಯುಗ ಪ್ರೆಸ್, ಉಡುಪಿ.



ನಂ.3
ಮುಂಬಾಯಿ
ಕರ್ನಾಟಕ ಶಾಖೆ:

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು

	ರೂ	ಆ
ಸುಲಭದಲ್ಲಿ ಇಂಗ್ಲಿಷ್ (ಇಂಗ್ಲಿಷ್ ಸ್ವಯಂಬೋಧಿನಿ)	1	8
ಬಾಲವಾಙ್ಮಯ (ಬಾಲಸಾಹಿತ್ಯದ ವಿವರಣೆ)	0	3
ಆಹುತಿ ಇತ್ಯಾದಿ ಕತೆಗಳು(ಕತೆಗಳು)	0	12
ಶ್ರೀಮುಖ (ಕವಿತೆಗಳು)	1	0
ಚಿಗುರು (ಕತೆಗಳ ಸಂಗ್ರಹ)	0	6
ಲೋಪಾಮುದ್ರೆ	0	6
ಪ್ರತೀಕಾರ (ನಾಟಕ)	0	8
ಪ್ರೇಮ ಪ್ರವಾಹ (ಕಥಾಸಂಗ್ರಹ)	0	8
ಅಂತರಂಗದ ಕಥೆಗಳು (ಕಥಾಸಂಗ್ರಹ)	0	12
ಶಂಭುಕ ವಧೆ (ನಾಟಕ)	0	2
ಮುಗುಳು (ಪದ್ಯಸಂಗ್ರಹ)	0	4
ವೀರಭೂಮಿ (ಕಾದಂಬರಿ)	0	2
ಮೀರಾಬಾಯಿ (ನಾಟಕ)	0	10
ಸರಸ್ವತಿ (,,)	0	12
ಮನೆಮದ್ದು	2	0
ವೈಯಕ್ತಿಕ ಆರೋಗ್ಯ	0	2
ಆದರ್ಶ ಆರೋಗ್ಯಖಾತೆ	0	2
ನಮ್ಮ ಉಡುಪಿ	0	10
ಕಾಂಗ್ರೆಸಿನ 60 ವರ್ಷಗಳು	0	8
ವಿಜ್ಞಾನದ ವಿಚಿತ್ರಗಳು	2	4
ಐಕ್ಯಗಾನ	1	8
ಭಾರದ್ವಾಜರ ಇಂಗ್ಲಿಷ್ ಕನ್ನಡ ಡಿಕ್ಷನೆರಿ	4	8
ಕ್ರಿಸ್ಮಸ್ ಕಾಣಿಕೆ ಮತ್ತು ಇತರ ಕತೆಗಳು	1	2
ಬದುಕಿನ ದಾರಿ (ಕಾದಂಬರಿ)	1	8
ಸುಶೀಲೆ (ಕಾದಂಬರಿ)	1	0
ಲಾವಣ್ಯವತಿ (ಕಾದಂಬರಿ)	0	12
ವ್ಯವಹಾರಜ್ಞಾನದರ್ಪಣ	1	8

(1) ನವಯುಗ ಪ್ರೆಸ್, ಉಡುಪಿ

(2) ನವಭಾರತ ಪುಸ್ತಕ ಭಂಡಾರ, ಉಡುಪಿ

ಉಡುಪಿಯ 'ಕಿರಿಯರ ಪ್ರಪಂಚ'ದ ಪ್ರಕಟಣೆಗಳು

		ರೂ.	ಆ.
ಸ್ವತಂತ್ರ ಜೀವನೋಪಾಯ	(ಪ್ರಹಸನ)	0	3
ಸಂಶಯ ಪಿಶಾಚಿ	(ನಾಟಕ)	0	8
ನಾಡಕತೆಗಳು	(ಕಥಾ ಸಂಕಲನ)	0	3
ಕಾವ್ಯ ಸಾಮ್ರಾಜ್ಯ	(ಕವಿತಾ ಸಂಗ್ರಹ)	1	4
ಕುಶಲವ	(ನವ ಪೌರಾಣಿಕ ನಾಟಕ)	0	6
ಮಧುವನ	(ಕಥಾ ಸಂಗ್ರಹ)	3	0
ವ್ಯಭಿಚಾರಿಣಿ ಯಾರು?	(ನಾಟಕ)	1	0
ಹೆಂಡ್ತಿ ಗಂಡನಾದರೆ	(ಪ್ರಹಸನ)	0	4
ಪುರುಷವಧು	,,	0	4
ಸನ್ಯಾಸಿಯು ಜೋಗಿನಲ್ಲಿ	(ಕಾದಂಬರಿ)	0	8
ನಂದಾದೀಪ	(ಕತೆಗಳು)	0	14
ದೇಶಭಕ್ತ	(ನಾಟಕ)	1	4
ಪ್ರೇಮ ವಿಜಯ	(ನಾಟಕ)	1	0
ರಂಗಭೂಮಿ	(ನಾಟಕ)	0	8
ಸೇವಾಪಥ	(ನಾಟಕ)	0	8
ನಾರೀ ಹೃದಯ	(ಕತೆಗಳು)	0	14
ಭಾರತೀಯ ಕತೆಗಳು	(ಕತೆಗಳು)	0	14
ಪ್ರಕಾಶ	(ನಾಟಕ)	2	4
ಮೂರು ಪ್ರಹಸನಗಳು	(ಪ್ರಹಸನಗಳು)	0	14
ನಗೆ ನೋಟಗಳು	(ವಿನೋದ ಕತೆಗಳು)	0	14
ಅನ್ನದೇವರು ಮತ್ತು ಇತರ ಕತೆಗಳು	(ಕತೆಗಳು)	1	0
ಭಾರತದಲ್ಲಿ ಜಾತಿಭೇದ	(ಪ್ರಬಂಧ)	1	4
ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು		0	12
ಆಕಾಶಗಂಗೆ	(ಕತೆಗಳು)	1	12
ಸ್ವಾತಂತ್ರ್ಯವೀರ ಸಾವರಕರರು	(ಜೀವನ ಚರಿತ್ರೆ)	1	4
ಜೀವನ ಸಂಗ್ರಾಮ	(ನಾಟಕ)	1	8
ಕದಂಬ	(ಕಥಾಗುಚ್ಛ)	1	4
ಕವಿತಾ ಕಾಮಿನಿ—ಭಾಗ ೧	(ಕವಿತೆಗಳು)	2	0
ಸ್ವರಾಜ್ಯ ವಿಜಯ	(ಪದ್ಯ—ಅರ್ಥ ಸಹಿತ ಯಕ್ಷಗಾನ)	0	8
ಸಪ್ತಸಾಗರ	(ಏಳು ಕತೆಗಳು)	0	12
ಜಮೀನ್ದಾರ	(ಪತ್ತೇದಾರಿ ಕಾದಂಬರಿ)	1	8

ವಿಕ್ರಯಾಧಿಕಾರಿಗಳು:- **ನವಭಾರತ ಪುಸ್ತಕ ಭಂಡಾರ, ಉಡುಪಿ.**

ವಿಜ್ಞಾಪನೆ

ಅಭಿಪ್ರಾಯಗಳು

ಪಿ. ವೆಂಕೋಬಾಚಾರ್ಯರ್, ಬಿ.ಎ.ಬಿ.ಟಿ.
ಹುಬ್ಬಳ್ಳಿ, 23-2-4

ಅಂತರಂಗದ ಸಂಪಾದಕರಿಗೆ,

"ಅಂತರಂಗ"ಕ್ಕೆ ನನ್ನಂತರಂಗದ ಸ್ವಾಗತ.

ತಮ್ಮೆಲ್ಲ ಹೊಸ ಯೋಜನೆಯು ಸಣ್ಣ ಹೊತ್ತಿಗೆಗಳು ಬಂ ಸೇರಿದವು. ತಮ್ಮ ಈ ಯೋಜನೆ ಬಹು ಯೋಗ್ಯ, ಉಪಕಾರವು ವಾಗಿದೆ; ಆದರೆ ಕಷ್ಟ ನಿಷ್ಠುರವೂ ಇದೆ. ತಾವು ಸಾಹಸಿಗಳು; ಜನ ಅಂತರಂಗವನ್ನರಿತು, ಅವರ ಸುಧಾರಣೆಗೆ ನೀಡುತ್ತಲಿರುವ ಈ ನಿ ಸೇವೆ ಸ್ತುತ್ಯ ಮೊದಲಿಗೆ ಕಷ್ಟವೆನಿಸಿದರೂ, ಇದರ ಉಪಯೋ ಜನರು ಬೇಗ ಅರಿತು ನಿಮ್ಮ ಸಾಹಸ ಯಶಸ್ವಿಯಾಗುವುದೆಂದು ನ ನಂಬಿಕೆ. ಶ್ರದ್ಧೆಯಿಂದ ಮುಂದರಿಯುವ ಶಕ್ತಿ ನಿಮ್ಮಲ್ಲಿದೆ; ಗೆಲು ನಿಮ್ಮದು.

ಪಿ. ವೆಂಕೋಬಾಚಾಯ

ಅಂತರಂಗದ ಸಂಪಾದಕರಿಗೆ,

ತಮ್ಮಿಂದ ಹೊರಡುತ್ತಿರುವ "ಅಂತರಂಗ"ವನ್ನು ನಾನು ಎಂ ವರ್ಷದಿಂದ ತಪ್ಪದೆ ಓದುತ್ತಲಿದ್ದೇನೆ. ಪತ್ರಿಕಾವ್ಯವಸಾಯದಲ್ಲಿ ತ ಸೇವೆಯು ಚಿರಸ್ಮರಣೀಯವಾದುದು. "ಅಂತರಂಗ"ವನ್ನು ಒಂ ರೀತಿಯಲ್ಲಿ ನಡೆಸಿಕೊಂಡು ಬಂದು, ಈಗು ಮೇಲ್ಮಟ್ಟದ ತರಗತಿಗೆ ತರ ಬಹಳ ಶ್ರಮ ವಹಿಸಿದ್ದೀರಿ, ತಾವು ಈಗ ಹೊರಡಿಸುತ್ತಿರುವ ಪುಸ್ತ ಕಾರದ "ಅಂತರಂಗ"ಕ್ಕೆ ಮಹಾಜನ ಗೆಳಬೆಂಬಲ ಸಿಕ್ಕಿ, ಯಶಸ್ವಿಯ ಲೆಂದು ಹಾರೈಸುತ್ತೇನೆ.

ಸಾಗರ, 19-2-49. ಟಿ. ಮಹಾಬಲೇಶ್ವರ ಭ

Regd No. M. 3935 1-3-1949 & 8-3-19

Printed & Published by K. H Shetty at the Navayuga Press, Udipi